**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

# ಕರ್ನಾಟಕ ಮೇಲ್ಪಾಟು ಮಂಡಳಿಗಳ ಅಧಿನಿಯಮ, 1976

**(ಕರ್ನಾಟಕ ಅಧಿನಿಯಮ ಸಂಖ್ಯೆ 1976ರ 11)**

# The Karnataka Improvement Boards Act, 1976

(Karnataka Act No. 11 of 1976)

**ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ**

**ಮುದ್ರಿತವಾಗಿ ಪ್ರಕಟಿತವಾಗಿದೆ**

# ಕರ್ನಾಟಕ ಮೇಲ್ಪಾಟು ಮಂಡಲಿಗಳ ಅಧಿನಿಯಮ, 1976

**(ಕರ್ನಾಟಕ ಅಧಿನಿಯಮ ಸಂಖ್ಯೆ 1976ರ 11)**

# The Karnataka Improvement Boards Act, 1976

(Karnataka Act No. 11 of 1976)

## ಕರ್ನಾಟಕ ಮೇಲ್ಪಾಟು ಮಂಡಲಿಗಳ ಅಧಿನಿಯಮ, 1976
## ವಿಷಯಾನುಕ್ರಮಣಿಕೆ

### ಅಧ್ಯಾಯ – I
### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ ...
2. ಪರಿಭಾಷೆಗಳು

### ಅಧ್ಯಾಯ – II

3. ಮೇಲ್ಪಾಟು ಮಂಡಲಿಗಳ ಸ್ಥಾಪನೆ ಮತ್ತು ನಿಗಮನ
4. ಮಂಡಲಿಯ ರಚನೆ
5. ಪದಾವಧಿ
6. ಆಕಸ್ಮಿಕ ರಿಕ್ತತೆ
7. ಸದಸ್ಯತ್ವದ ಪದಕ್ಕೆ ಅನರ್ಹತೆ
8. ಸದಸ್ಯನನ್ನು ತೆಗೆದು ಹಾಕುವುದು
9. ಮಂಡಲಿಯ ಸಭೆಗಳು
10. ವ್ಯವಹರಣೆಗಳನ್ನು ಯುಕ್ತವೆಂದು ಮತ್ತು ಸಿಂಧುವೆಂದು ಪೂರ್ವಭಾವನೆ ಮಾಡತಕ್ಕದ್ದು
11. ಕರಾರುಗಳನ್ನು ಬರೆದುಕೊಡುವುದು
12. ಅಧ್ಯಕ್ಷನ ಕರ್ತವ್ಯಗಳು

### ಅಧ್ಯಾಯ – III
### ಕರ್ತವ್ಯಗಳು ಮತ್ತು ಅಧಿಕಾರಗಳು

13. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಅಭಿವೃದ್ಧಿ ಮೇಲ್ಪಾಟು ಇತ್ಯಾದಿಗಳ ವೆಚ್ಚವನ್ನು ವಹಿಸಲು ಮಂಡಲಿಗಿರುವ ಅಧಿಕಾರ
14. ಅಭಿವೃದ್ಧಿ ಯೋಜನೆಯಲ್ಲಿ ಅಥವಾ ಮೇಲ್ಪಾಟು ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು
15. ಯೋಜನೆಯನ್ನು ತಯಾರಿಸಿದ ನಂತರದ ಪ್ರಕ್ರಿಯೆ
16. ಯೋಜನೆಯನ್ನು ಕಳಿಸುವುದು
17. ಯೋಜನೆಗೆ ಮಂಜೂರಾತಿ ಮತ್ತು ಮಾರ್ಪಾಟಿನ ಸಂದರ್ಭದಲ್ಲಿ ಪುನರ್ ಪ್ರಕಟಣೆ
18. ಮಂಜೂರಾದ ಮೇಲೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ವಿವರಗಳನ್ನು ಕೊಡುವ ಘೋಷಣೆಯನ್ನು ಪ್ರಕಟಿಸತಕ್ಕದ್ದು
19. ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸುವುದು
20. ಮಂಡಲಿಯಿಂದ ಪುರೋಭಿವೃದ್ಧಿ ತೆರಿಗೆಯ ನಿರ್ಧರಣ
21. ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡುವ ರೀತಿ
22. ಪುರೋಭಿವೃದ್ಧಿ ತೆರಿಗೆಯ ವಸೂಲಿ
23. ಹೊಸ ಘೋಷಣೆಯ ಮೇರೆಗೆ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಹಣ ಸಂದಾಯ ಮಾಡುವುದು ಪ್ರತಿಬಂಧಕವಲ್ಲ
24. ಹೆಚ್ಚಿನ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಮಂಡಲಿಗಿರುವ ಅಧಿಕಾರ
25. ವಸೂಲು ಮಾಡಲಾದ ಪುರೋಭಿವೃದ್ಧಿ ತೆರಿಗೆಯನ್ನು ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಪ್ರಾಧಿಕಾರದ ನಿಧಿಗಳಿಗೆ ಜಮೆ ಮಾಡುವುದು
26. ಮೂರು ವರ್ಷಗಳೊಳಗೆ ಮಂಡಲಿಯು ಯೋಜನೆಗಳನ್ನು ಕಾರ್ಯಗತಗೊಳಿಸತಕ್ಕದ್ದು

### ಅಧ್ಯಾಯ – IV
### ಸಾಮಾನ್ಯ ಪ್ರಕರಣಗಳು

27. ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಬೀದಿಯ ರಚನೆಗಾಗಿ ಅಥವಾ ಬದಲಾವಣೆಗಾಗಿ, ಮಂಡಲಿಗೆ ಅಗತ್ಯವಿರುವ ಭೂಮಿಯು ತಾತ್ಕಾಲಿಕವಾಗಿ ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದು

28. ಮಂಡಲಿಯು ಸ್ಥಳೀಯ ಪ್ರಾಧಿಕಾರಗಳ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು
29. ಬೀದಿಗಳು ಪೂರ್ಣಗೊಂಡ ಬಳಿಕ ಅವು ಮತ್ತು ಬಯಲು ಜಾಗಗಳು ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ಅವುಗಳನ್ನು ಸುಸ್ಥಿತಿಯಲ್ಲಿಡತಕ್ಕದ್ದು
30. ಕೆಲವು ಸಂದರ್ಭಗಳಲ್ಲಿ ಮಂಡಲಿಯು ನಿವೇಶನಗಳನ್ನು ಮಾರತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ
31. ಹೊಸ ಬಡಾವಣೆಗಳ ಅಥವಾ ಲೇಔಟುಗಳ ನಿರ್ಮಾಣ ಅಥವಾ ಹೊಸ ಖಾಸಗಿ ಬೀದಿಗಳ ರಚನೆ
32. ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ವ್ಯತ್ಯಾಸಗೊಳಿಸುವುದು ಅಥವಾ ನಾಶಪಡಿಸುವುದು
33. ಕಾಮಗಾರಿಯನ್ನು ಮಾಡಬೇಕೆಂದು ಆದೇಶವನ್ನು ಮಾಡಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾನೇ ಮಾಡಲು ಮಂಡಲಿಗಿರುವ ಅಧಿಕಾರ

**ಅಧ್ಯಾಯ – V**

**ಭೂ ಸ್ವಾಧೀನ**

34. ಒಪ್ಪಂದದ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮಂಡಲಿಗೆ ಇರುವ ಅಧಿಕಾರ
35. ಒಪ್ಪಂದದ ಮೂಲಕವಲ್ಲದ ಇತರ ರೀತಿಯಲ್ಲಿ ಮಾಡಿಕೊಳ್ಳುವ ಭೂ ಸ್ವಾಧೀನಕ್ಕೆ ಅನ್ವಯವಾಗುವ ಉಪಬಂಧಗಳು

**ಅಧ್ಯಾಯ – VI**

**ಸ್ವತ್ತು ಮತ್ತು ಹಣಕಾಸು**

36. ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಭೂಮಿಯನ್ನು ಮಂಡಲಿಗೆ ವರ್ಗಾಯಿಸಲು ಸರ್ಕಾರಕ್ಕಿರುವ ಅಧಿಕಾರ
37. ಸ್ವತ್ತನ್ನು ಗೇಣಿಗೆ ಕೊಡಲು, ಮಾರಲು ಅಥವಾ ವರ್ಗಾಯಿಸಲು ಮಂಡಲಿಗಿರುವ ಅಧಿಕಾರ
38. ಸಾಲ ಪಡೆಯಲು ಮಂಡಲಿಗಿರುವ ಅಧಿಕಾರ
39. ಮಂಡಲಿ ನಿಧಿ ಮತ್ತು ಅಂಥ ನಿಧಿಗೆ ಜಮೆ ಮಾಡಬೇಕಾದ ಬಾಬುಗಳು ಮತ್ತು ಅದನ್ನು ಇಡುವುದು
40. ಆದಾಯದ ಮತ್ತು ವೆಚ್ಚದ ವಾರ್ಷಿಕ ಅಂದಾಜನ್ನು ಮಂಡಿಸುವುದು
41. ಮಂಡಲಿಯು ಅಂಥ ಅಂದಾಜುಗಳನ್ನು ಅನುಮೋದಿಸುವುದು ಅಥವಾ ತಿದ್ದುಪಡಿಮಾಡುವುದು
42. ಅಂದಾಜುಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು
43. ಅವಶ್ಯವಾದಾಗ ಪೂರಕ ಅಂದಾಜುಗಳನ್ನು ತಯಾರಿಸಬಹುದು ಮತ್ತು ಒಪ್ಪಿಸಬಹುದು
44. ವೆಚ್ಚದ ಬಗೆಗಿನ ಉಪಬಂಧಗಳು
45. ಪುನರ್ವಿನಿಯೋಗ ಮಾಡಲು ಅಧಿಕಾರ
46. ಲೆಕ್ಕ ಪರಿಶೋಧನೆ
47. ದಸ್ತಾವೇಜನ್ನು ಹಾಜರುಪಡಿಸುವಂತೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳು ಹಾಜರಾಗುವಂತೆ ಅಗತ್ಯಪಡಿಸಲು ಲೆಕ್ಕಪರಿಶೋಧಕನಿಗಿರುವ ಅಧಿಕಾರ
48. 47ನೇ ಪ್ರಕರಣದ ಮೇರೆಗಿನ ಕಡ್ಡಾಯ ಕೋರಿಕೆಯನ್ನು ಪಾಲಿಸದಿರುವ ಬಗ್ಗೆ ದಂಡ
49. ಲೆಕ್ಕ ಪರಿಶೋಧನಾ ವರದಿ
50. ನ್ಯೂನತೆಗಳನ್ನು ಮಂಡಲಿಯು ಪರಿಹರಿಸುವುದು
51. ಕಾನೂನು ವಿರುದ್ಧ ಸಂದಾಯಕ್ಕಾಗಿ ಅಥವಾ ನಿರ್ಲಕ್ಷ್ಯದಿಂದಾಗಿ ಅಥವಾ ದುರ್ನಡತೆಯಿಂದಾಗಿ ಉಂಟಾದ ನಷ್ಟಕ್ಕಾಗಿ ಸರ್ಕಾರವು ಅಪವ್ಯಯ ಭರ್ತಿಯನ್ನು ಅಥವಾ ಚಾರ್ಜನ್ನು ವಿಧಿಸುವುದು
52. ಅಪವ್ಯಯ ಭರ್ತಿಯನ್ನು ಮತ್ತು ಚಾರ್ಜನ್ನು ಹೇಗೆ ವಸೂಲು ಮಾಡಬೇಕು

**ಅಧ್ಯಾಯ – VII**
**ಮಂಡಲಿಯ ಅಧಿಕಾರಿಗಳು ಮತ್ತು ನೌಕರರು**

53. ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸಬೇಕಾಗಿರುವ ಅಧಿಕಾರಿಗಳ ಮತ್ತು ನೌಕರರ ಅನುಸೂಚಿ
54. ನೇಮಕಗಳನ್ನು ಯಾರು ಮಾಡತಕ್ಕದ್ದು

**ಅಧ್ಯಾಯ - VIII**
**ನಿಯಂತ್ರಣ**

55. ಸರ್ಕಾರದಿಂದ ನಿಯಂತ್ರಣ
56. ಮಂಡಲಿಯಿಂದಾದ ತಪ್ಪುಗಳ ಸಂದರ್ಭದಲ್ಲಿ ಕೈಕೊಳ್ಳಬೇಕಾದ ಕ್ರಮ
57. ಆದೇಶ ಇತ್ಯಾದಿಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ಅಧಿಕಾರ
58. ಮಂಡಲಿಯ ರದ್ದಿಯಾತಿ
59. ಮಂಡಲಿಯ ವಿಘಟನೆ
60. ಮಂಡಲಿಯೊಂದಿಗೆ ಮಾಡಿಕೊಂಡ ಕರಾರುಗಳಲ್ಲಿ ಹಿತಾಸಕ್ತಿ ಹೊಂದಿರುವುದಕ್ಕಾಗಿ ದಂಡ
61. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರತಕ್ಕದ್ದು
62. ಪ್ರಾಸಿಕ್ಯೂಷನ್‌ಗಳ ಮಂಜೂರಾತಿ
63. ಜುಲ್ಮಾನೆಗಳನ್ನು ಮಂಡಲಿಯ ನಿಧಿಗೆ ಜಮೆ ಮಾಡತಕ್ಕದು
64. ಬರಬೇಕಾಗಿರುವ ಮೊತ್ತಗಳ ವಸೂಲಿ
65. ಸದ್ಭಾವನೆಯಿಂದ ಕೈಕೊಳ್ಳಲಾದ ಯಾವುದೇ ಕ್ರಮದ ರಕ್ಷಣೆ
66. ನೋಟೀಸಿನ ಜಾರಿ
67. ಕಂಪನಿಗಳಿಂದ ಅಪರಾಧಗಳು
68. ಇತರ ಕಾನೂನುಗಳ ಪರಿಣಾಮ

**ಅಧ್ಯಾಯ – IX**
**ಸಂಕೀರ್ಣ**

69. ನಿಯಮಗಳು
70. ಉಪವಿಧಿಗಳನ್ನು ರಚಿಸಲು ಮಂಡಲಿಗಿರುವ ಅಧಿಕಾರ
71. ನಿಯಮಗಳನ್ನು ಮತ್ತು ಉಪವಿಧಿಗಳನ್ನು ಪ್ರದರ್ಶಿಸತಕ್ಕದ್ದು
72. ಕರ್ನಾಟಕ ಅಧ್ಯಾದೇಶ, 1975ರ 20ರ ನಿರಸನ

**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ನಂ. ಲಾ 60 ಎಲ್.ಎಮ್.ಪಿ. 82 ಬೆಂಗಳೂರು, ದಿನಾಂಕ: 8ನೇ ಆಗಸ್ಟ್ 1985**

1963ರ ಕರ್ನಾಟಕ ರಾಜಭಾಷಾ ಅಧಿನಿಯಮದ (1963ರ ಕರ್ನಾಟಕ ಅಧಿನಿಯಮ ನಂ.26)ರ 5–ಎ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಪ್ರಯೋಗಿಸಿ ಕರ್ನಾಟಕ ರಾಜ್ಯಪಾಲನಾದ ನಾನು ಶ್ರೀ ಎ.ಎನ್. ಬ್ಯಾನರ್ಜಿ, ಕರ್ನಾಟಕ ಮೇಲ್ಪಾಟು ಮಂಡಲಿಗಳ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1976ರ 11), ಈ ಕೆಳಗಿನ ಕನ್ನಡ ಅನುವಾದವನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಎ.ಎನ್. ಬ್ಯಾನರ್ಜಿ,**
ಕರ್ನಾಟಕ ರಾಜ್ಯಪಾಲರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
**ಎಂ. ಉಮೇಶ್**
ಸರ್ಕಾರದ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಆಡಳಿತ–2)

**ಕರ್ನಾಟಕ ಅಧಿನಿಯಮ, 1976ರ 11**

**(1976ರ ಮಾರ್ಚ್ ಎಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)**

**ಕರ್ನಾಟಕ ಮೇಲ್ಮಾಟು ಮಂಡಲಿಗಳ ಅಧಿನಿಯಮ, 1976**

**(1976ರ ಮಾರ್ಚ್ ಎರಡನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆದಿದೆ)**

ಕರ್ನಾಟಕ ರಾಜ್ಯದಲ್ಲಿನ ನಗರ ಪ್ರದೇಶಗಳ ಅಭಿವೃದ್ಧಿಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಮೇಲ್ಮಾಟು ಮಂಡಲಿಗಳನ್ನು ಸ್ಥಾಪಿಸಲು ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿನ ನಗರ ಪ್ರದೇಶಗಳ ಅಭಿವೃದ್ಧಿಗಾಗಿ ಮೇಲ್ಮಾಟು ಮಂಡಲಿಗಳನ್ನು ಸ್ಥಾಪಿಸಲು ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.-

**ಅಧ್ಯಾಯ – I**
**ಪ್ರಾರಂಭಿಕ**

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಮೇಲ್ಮಾಟು ಮಂಡಲಿಗಳ ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಹುಬ್ಬಳ್ಳಿ–ಧಾರವಾಡ ಪೌರನಿಗಮದಲ್ಲಿ ಅಡಕವಾಗಿರುವ ನಗರ ಪ್ರದೇಶಗಳಲ್ಲಿ ಮತ್ತು ಬೆಳಗಾವಿ, ಬಳ್ಳಾರಿ, ವಿಜಾಪುರ, ಭದ್ರಾವತಿ, ದಾವಣಗೆರೆ, ಕಲ್ಬುರ್ಗಿ ಮತ್ತು ಶಿವಮೊಗ್ಗ ನಗರಗಳಲ್ಲಿ 1975ರ ನವೆಂಬರ್ ಇಪ್ಪತ್ತನೆಯ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು, ಮತ್ತು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ನಗರ ಪ್ರದೇಶಗಳಲ್ಲಿ ಮತ್ತು ಅಂಥ ದಿನಾಂಕದಂದು, ಮತ್ತು ಬೇರೆ ನಗರ ಪ್ರದೇಶಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(ಎ) 'ಮಂಡಲಿ' ಎಂದರೆ, ಯಾವುದೇ ನಗರ ಪ್ರದೇಶಕ್ಕಾಗಿ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಮೇಲ್ಮಾಟು ಮಂಡಲಿ;

(ಬಿ) 'ಅಧ್ಯಕ್ಷ' ಎಂದರೆ, ಮಂಡಲಿಯ ಅಧ್ಯಕ್ಷ;

(ಸಿ) 'ಅಭಿವೃದ್ಧಿ' ಎಂದರೆ, ಅದರ ವ್ಯಾಕರಣ ವ್ಯತ್ಯಾಸಗಳೊಂದಿಗೆ ಭೂಮಿಯಲ್ಲಿ ಅದರ ಮೇಲೆ, ಮೇಲುಗಡೆ ಅಥವಾ ಒಳಗೆ ಕಟ್ಟಡದ ನಿರ್ಮಾಣದ ಇಂಜಿನಿಯರಿಂಗ್‌ನ ಅಥವಾ ಇತರ ಕಾರ್ಯಗಳನ್ನು ಮಾಡುವುದು ಅಥವಾ ಯಾವುದೇ ಕಟ್ಟಡದಲ್ಲಿ ಅಥವಾ ಭೂಮಿಯಲ್ಲಿ ಯಾವುದೇ ಮಹತ್ವದ ಬದಲಾವಣೆಯನ್ನು ಮಾಡುವುದು ಮತ್ತು ಇದು ಪುನರಭಿವೃದ್ಧಿಯನ್ನು ಒಳಗೊಳ್ಳುತ್ತದೆ; ಆದರೆ ಕುಡಿಯುವ ನೀರಿನ ಮತ್ತು ಚರಂಡಿಯ ಸೌಕರ್ಯಗಳ ನಿಯಂತ್ರಣವನ್ನು ಹಾಗೂ ಅಭಿವೃದ್ಧಿಯನ್ನು ಕೊಳಚೆ ಪ್ರದೇಶ ನಿವಾರಣೆಯ ಅಥವಾ ಕೊಳಚೆ ಪ್ರದೇಶದ ಮೇಲ್ಪಾಟನ್ನು ಒಳಗೊಳ್ಳುವುದಿಲ್ಲ;

(ಡಿ) 'ಅಭಿವೃದ್ಧಿ ಯೋಜನೆ' ಎಂದರೆ, ನಗರ ಪ್ರದೇಶದ ಅಭಿವೃದ್ಧಿ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ತಯಾರಿಸಲಾದ ಮತ್ತು ಮಂಜೂರು ಮಾಡಲಾದ ಯೋಜನೆ;

(ಇ) 'ಇಂಜಿನಿಯರಿಂಗ್ ಕಾರ್ಯಗಳು' ರಸ್ತೆಯ ಪ್ರವೇಶಕ್ಕೆ ಅನುಕೂಲ ಮಾಡಿಕೊಡುವ ಸಾಧನಗಳ ರಚನೆಯನ್ನು ಅಥವಾ ನಿರ್ಮಾಣವನ್ನು ಅಥವಾ ನೀರು ಸರಬರಾಜಿನ ಸಾಧನಗಳ ನಿರ್ಮಾಣವನ್ನು ಒಳಗೊಳ್ಳುತ್ತದೆ;

(ಎಫ್) 'ಸರ್ಕಾರ' ಎಂದರೆ, ರಾಜ್ಯ ಸರ್ಕಾರಿ;

(ಜಿ) 'ಮೇಲ್ಪಾಟು' ಎಂದರೆ, ಅದರ ವ್ಯಾಕರಣದ ವ್ಯತ್ಯಾಸಗಳೊಂದಿಗೆ, ರಸ್ತೆಗಳನ್ನು ಅಗಲ ಮಾಡುವಂಥ ಪೌರಸೌಲಭ್ಯಗಳನ್ನು, ಸಾಮುದಾಯಿಕ ಸೌಕರ್ಯಗಳನ್ನು, ಉಪಯುಕ್ತತೆಗಳನ್ನು ಮತ್ತು ಸೇವೆಗಳನ್ನು ವಿಸ್ತರಿಸುವಂಥ ಅಥವಾ ಹೆಚ್ಚಿಸುವಂಥ ಕಾಮಗಾರಿಯನ್ನು ಕೈಗೊಳ್ಳುವ ಮೂಲಕ ಸ್ಥಳದ ಪರಿಸರದ ಪರಿಸ್ಥಿತಿಗಳನ್ನು ಮೇಲ್ಪಾಟು ಮಾಡುವ ಉದ್ದೇಶಕ್ಕಾಗಿ ಯಾವುದೇ ನಿರ್ಮಿತ ಪ್ರದೇಶದ, ಅದು ಭಾಗಶಃ ನಿರ್ಮಿತವಾಗಿರಲಿ ಅಥವಾ ಪೂರ್ಣವಾಗಿ ನಿರ್ಮಿತವಾಗಿರಲಿ, ಪುನರಭಿವೃದ್ಧಿ; ಆದರೆ ಕುಡಿಯುವ ನೀರಿನ ಚರಂಡಿ ಸೌಕರ್ಯಗಳ ನಿಯಂತ್ರಣವನ್ನು ಹಾಗೂ ಅಭಿವೃದ್ಧಿಯನ್ನು ಮತ್ತು ಕೊಳಚೆ ಪ್ರದೇಶದ ನಿರ್ಮೂಲನವನ್ನು ಹಾಗೂ ಕೊಳಚೆ ಪ್ರದೇಶದ ಮೇಲ್ಪಾಟನ್ನು ಇದು ಒಳಗೊಳ್ಳುವುದಿಲ್ಲ;

(ಹೆಚ್) 'ಮೇಲ್ಪಾಟು ಯೋಜನೆ' ಎಂದರೆ, ನಗರ ಪ್ರದೇಶದ ಮೇಲ್ಪಾಟಿನ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ತಯಾರಿಸಲಾದ ಮತ್ತು ಮಂಜೂರು ಮಾಡಲಾದ ಯೋಜನೆ,

(ಐ) 'ಭೂಮಿ' – ಎಂಬುದು ಭೂಮಿಯಿಂದ ಮತ್ತು ನೆಲಕ್ಕೆ ಲಗತ್ತಾಗಿರುವ ವಸ್ತುಗಳಿಂದ ಅಥವಾ ಭೂಮಿಗೆ ಲಗತ್ತಾಗಿರುವ ಯಾವುದೇ ವಸ್ತುವಿಗೆ ಖಾಯಂ ಆಗಿ ಬಂಧಿಸಲಾಗಿರುವ ವಸ್ತುಗಳಿಂದ ಒದಗುವ ಪ್ರಯೋಜನಗಳನ್ನು ಒಳಗೊಳ್ಳುತ್ತದೆ;

(ಜೆ) 'ಸ್ಥಳೀಯ ಪ್ರಾಧಿಕಾರ' ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಅಥವಾ ಮುಂದುವರಿಯುತ್ತಿರುವ ಪೌರನಿಗಮ, ಪೌರ ಪರಿಷತ್ತು, ನೈರ್ಮಲ್ಯ ಮಂಡಲಿ ಅಥವಾ ಅಧಿಸೂಚಿತ ಪ್ರದೇಶ ಸಮಿತಿ;

(ಕೆ) 'ಸದಸ್ಯ' ಎಂದರೆ, ಮಂಡಲಿಯ ಸದಸ್ಯ;

(ಎಲ್) 'ಯೋಜನಾ ಪ್ರಾಧಿಕಾರ' ಎಂದರೆ, 1961ರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ 2ನೇ ಪ್ರಕರಣದ (7)ನೇ ಖಂಡದಲ್ಲಿ ಪರಿಭಾಷಿಸಲಾದ ಯೋಜನಾ ಪ್ರಾಧಿಕಾರ;

(ಎಂ) 'ಪ್ರಕರಣ' ಎಂದರೆ, ಅಧಿನಿಯಮದ ಪ್ರಕರಣ;

(ಎನ್) 'ಬೀದಿ' ಎಂಬುದಕ್ಕೆ 1964ರ ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮದಲ್ಲಿರುವ ಅರ್ಥವೇ ಇರತಕ್ಕದ್ದು;

(ಒ) 'ನಗರ ಪ್ರದೇಶ' ಎಂದರೆ, ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿರುವ ಸ್ಥಳೀಯ ಪ್ರದೇಶ.

(2) ಇದರಲ್ಲಿ ಉಪಯೋಗಿಸಲಾಗಿರುವ ಆದರೆ ಪರಿಭಾಷಿತವಾಗಿರದಿರುವ ಎಲ್ಲಾ ಪದಗಳಿಗೆ ಮತ್ತು ಪದಾವಳಿಗಳಿಗೆ ಅನುಕ್ರಮವಾಗಿ ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಪೌರಸಭಾ ಕಾನೂನುಗಳಲ್ಲಿ ಕೊಟ್ಟಿರುವ ಅರ್ಥಗಳು ಇರತಕ್ಕದ್ದು.

## ಅಧ್ಯಾಯ – II

**3. ಮೇಲ್ವಾಟು ಮಂಡಲಿಗಳ ಸ್ಥಾಪನೆ ಮತ್ತು ನಿಗಮನ.–** (1) ಈ ಅಧಿನಿಯಮವು ಪ್ರಾರಂಭವಾದ ಅನಂತರ ಸಾಧ್ಯವಾದಷ್ಟು ಬೇಗನೆ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ, ಯಾವುದೇ ನಗರ ಪ್ರದೇಶದ ಬಗ್ಗೆ "........ ಸುಧಾರಣಾ ಮಂಡಲಿ" ಎಂದು ಕರೆಯಲ್ಪಡುವ ಮಂಡಲಿಯನ್ನು ಸ್ಥಾಪಿಸತಕ್ಕದ್ದು.

(2) ಮಂಡಲಿಯು, ಮೇಲೆ ಹೇಳಿದ ಹೆಸರಿನ ನಿರಂತರ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಸ್ವತ್ತನ್ನು ಆರ್ಜಿಸುವ, ಧಾರಣೆ ಮಾಡುವ ಮತ್ತು ವಿಲೇ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವಿರುವ ನಿಗಮ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆ ಹೂಡಲ್ಪಡತಕ್ಕದ್ದು.

**4. ಮಂಡಲಿಯ ರಚನೆ.–** ಮಂಡಲಿಯು ಈ ಕೆಳಕಂಡ ಸದಸ್ಯರನ್ನು ಹೊಂದಿರತಕ್ಕದ್ದು ಅಂದರೆ:–

(ಎ) ಸರ್ಕಾರದ ಮೂಲಕ ನೇಮಕಗೊಂಡ ಅಧ್ಯಕ್ಷ;

(ಬಿ) ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಹಾಯಕ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಸರ್ಕಾರದಿಂದ ನೇಮಕ ಹೊಂದಿದ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿ;

(ಸಿ) ಯಾವ ನಗರ ಪ್ರದೇಶಕ್ಕಾಗಿ ಮಂಡಲಿಯು ರಚಿತವಾಯಿತೋ ಅಲ್ಲಿ ಸಾಮಾನ್ಯವಾಗಿ ವಾಸಿಸುವ, ಸರ್ಕಾರದಿಂದ ನೇಮಕ ಹೊಂದಿದ ಇಬ್ಬರು ವ್ಯಕ್ತಿಗಳು; ಮತ್ತು

(ಡಿ) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಇಬ್ಬರು ಚುನಾಯಿತ ಪ್ರತಿನಿಧಿಗಳು.

**5. ಪದಾವಧಿ.–** (1) ಸರ್ಕಾರದ ಇಚ್ಛೆಗೆ ಒಳಪಟ್ಟು, ಸರ್ಕಾರದಿಂದ ನೇಮಕ ಹೊಂದಿದ ಅಧ್ಯಕ್ಷ ಮತ್ತು ಇತರ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು, ಸ್ಥಳೀಯ ಪ್ರಾಧಿಕಾರದ ಪ್ರತಿನಿಧಿಯ ಪದಾವಧಿಯು, ಅವನು ಕೌನ್ಸಿಲರನಾಗಿರುವುದು ಅಥವಾ ಸದಸ್ಯನಾಗಿರುವುದು ನಿಂತುಹೋದಾಗ ಅಥವಾ ಸ್ಥಳೀಯ ಪ್ರಾಧಿಕಾರವು ರದ್ದಾದಾಗ ಕೊನೆಗೊಳ್ಳತಕ್ಕದ್ದು.

(2) ಅಧ್ಯಕ್ಷ ಅಥವಾ ಪದನಿಮಿತ್ತ ಸದಸ್ಯನ ಹೊರತಾಗಿ ಬೇರೆ ಸದಸ್ಯನು ತನ್ನ ಸಹಿಯೊಂದಿಗೆ, ಸರ್ಕಾರಕ್ಕೆ ಬರೆದು ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು. ಆದರೆ ಅವನ ರಾಜೀನಾಮೆಯು ಅಂಗೀಕೃತವಾಗುವವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(3) ಮಂಡಲಿಯ ಯಾವುದೇ ಸ್ಥಾನವು ರಿಕ್ತವಾಗಿರುವ ಕಾರಣದಿಂದ ಅಥವಾ ಅದರ ರಚನೆಯಲ್ಲಿ ದೋಷವಿರುವ ಕಾರಣ ಮಾತ್ರದಿಂದ ಮಂಡಲಿಯ ಯಾವುದೇ ಕಾರ್ಯ ಅಥವಾ ವ್ಯವಹಣೆಯು ಅಮಾನ್ಯವಾಗತಕ್ಕದ್ದಲ್ಲ.

**6. ಆಕಸ್ಮಿಕ ರಿಕ್ತತೆ.–** ಅಧ್ಯಕ್ಷನ ಹೊರತಾಗಿ ಸದಸ್ಯನ ಪದದಲ್ಲಿ, ಅಂಥ ಸದಸ್ಯನ ಮರಣ, ರಾಜೀನಾಮೆ ಅಥವಾ ಅನರ್ಹತೆಯಿಂದ ಉಂಟಾದ ಅಥವಾ 5ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಆಧಾರದಿಂದ ಉಂಟಾದ ಯಾವುದೇ ಆಕಸ್ಮಿಕ ರಿಕ್ತತೆಯನ್ನು, ರಿಕ್ತತೆಯು ಉಂಟಾದ ಒಂದು ತಿಂಗಳೊಳಗೆ ಅದೇ ರೀತಿಯಲ್ಲಿ ಮತ್ತು 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಸಾಧ್ಯವಾದಷ್ಟರಮಟ್ಟಿಗೆ ಒಳಪಟ್ಟು ತುಂಬತಕ್ಕದ್ದು:

ಪರಂತು, ರದ್ದುಗೊಳಿಸಿದ ಸ್ಥಳೀಯ ಪ್ರಾಧಿಕಾರದ ಪ್ರತಿನಿಧಿಗಳು ಸರ್ಕಾರದ ಮೂಲಕ ನಾಮನಿರ್ದೇಶಿತರಾಗತಕ್ಕದ್ದು.

ಮತ್ತು ಪರಂತು, ಹಾಗೆ ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಸದಸ್ಯನು. ಯಾವ ಸದಸ್ಯನ ಸ್ಥಳದಲ್ಲಿ ಅವನು ನೇಮಕ ಹೊಂದಿರುತ್ತಾನೋ ಅವನ ಉಳಿದ ಅವಧಿಯವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

**7. ಸದಸ್ಯತ್ವದ ಪದಕ್ಕೆ ಅನರ್ಹತೆ.–** ಒಬ್ಬ ವ್ಯಕ್ತಿಯು,–

(ಎ) ಸರ್ಕಾರದ ಅಭಿಪ್ರಾಯದ ಮೇರೆಗೆ ನೈತಿಕ ಪತನವನ್ನು ಒಳಗೊಂಡ ಅಪರಾಧದ ಬಗ್ಗೆ ಸಿದ್ಧದೋಷಿಯಾಗಿದ್ದರೆ ಮತ್ತು ಕಾರಾವಾಸ ಶಿಕ್ಷೆಯಿಂದ ಶಿಕ್ಷಿಸಲ್ಪಟ್ಟಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿಸಲ್ಪಟ್ಟಿದ್ದರೆ; ಅಥವಾ

(ಸಿ) ಅನನ್ಮುಕ್ತ ದಿವಾಳಿದಾರನಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರದ ಸೇವೆಯಿಂದ ಅಥವಾ ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮದ ಸೇವೆಯಿಂದ ತೆಗೆದು ಹಾಕಲ್ಪಟ್ಟಿದ್ದರೆ ಅಥವಾ ವಜಾ ಮಾಡಲ್ಪಟ್ಟಿದ್ದರೆ; ಅಥವಾ

(ಇ) ಮಂಡಲಿಯ ಆದೇಶದ ಮೇರೆಗೆ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಅಥವಾ ಆ ಮಂಡಲಿಯೊಡನೆ ಅಥವಾ ಅದರ ಅಧೀನದಲ್ಲಿ ಅಥವಾ ಅದು ಅಥವಾ ಅವರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ, ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಸ್ವತಃ ಅಥವಾ ತನ್ನ ಪಾಲುದಾರನ ಮುಖಾಂತರ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಅವನು ಹೊಂದಿದ್ದರೆ;

(ಎಫ್) ಚುನಾಯಿತ ಸದಸ್ಯನಾಗಿದ್ದು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಿ ಕೌನ್ಸಿಲರ್‌ನಾಗಿರುವುದು ಅಥವಾ ಸದಸ್ಯನಾಗಿರುವುದು ಮುಕ್ತಾಯವಾದರೆ;

(ಜಿ) ವೇತನ ಪಡೆಯುವ ನ್ಯಾಯವಾದಿಯಾಗಿ ಮಂಡಲಿಯ ಪರವಾಗಿ ನಿಯೋಜಿತನಾಗಿದ್ದರೆ ಅಥವಾ ಮಂಡಲಿಯ ವಿರುದ್ಧ ನ್ಯಾಯವಾದಿಯಾಗಿ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ.

– ಅವನು ಸದಸ್ಯನಾಗಿ ನೇಮಿತನಾಗಲು ಮತ್ತು ಸದಸ್ಯನಾಗಿರಲು ಅನರ್ಹನಾಗಿರತಕ್ಕದ್ದು.

(2) ಮಂಡಲಿಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಜಾಹೀರಾತನ್ನು ಯಾವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆಯೋ ಆ ವೃತ್ತ ಪತ್ರಿಕೆಯಲ್ಲಿ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದ (1)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಯಾರೇ ವ್ಯಕ್ತಿಯು ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥ ವ್ಯಾಪ್ತಿಯಲ್ಲಿ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ.

**8. ಸದಸ್ಯನನ್ನು ತೆಗೆದು ಹಾಕುವುದು.–** ಯಾರೇ ಸದಸ್ಯನನ್ನು, ಕೆಳಕಂಡ ಸಂದರ್ಭದಲ್ಲಿ ಸರ್ಕಾರವು ತೆಗೆದುಹಾಕತಕ್ಕದ್ದು.

(ಎ) 7ನೇ ಪ್ರಕರಣದಲ್ಲಿ ನಮೂದಿಸಲಾಗಿರುವ ಅನರ್ಹತೆಗಳಿಗೆ ಒಳಪಟ್ಟರೆ:

ಪರಂತು, ಆ ಪ್ರಕರಣದ (ಇ) ಖಂಡದಲ್ಲಿ ನಮೂದಿಸಲಾಗಿರುವ ಅನರ್ಹತೆಗಳ ಪೈಕಿ ಯಾವುದಕ್ಕಾದರೂ ಅವನು ಒಳಪಡುವನೆಂಬ ಕಾರಣದಿಂದ ಯಾರೇ ಸದಸ್ಯನನ್ನು ಪ್ರಸ್ತಾಪದ ವಿರುದ್ಧವಾಗಿ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ತೆಗೆದುಹಾಕತಕ್ಕದ್ದಲ್ಲ; ಅಥವಾ

(ಬಿ) ಕಾರ್ಯವನ್ನು ನಿರ್ವಹಿಸಲು ಅವನು ಇನಕಾರ ಮಾಡಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಗೈರು ಹಾಜರಿಗಾಗಿ ಮಂಡಲಿಯಿಂದ ಅನುಮತಿಯನ್ನು ಪಡೆಯದೆ, ಅವನು ಒಂದಾದ ಮೇಲೊಂದು ಬರುವ ಮಂಡಲಿಯ ಮೂರು ಸಭೆಗಳಿಗೆ ಗೈರುಹಾಜರಾದರೆ; ಅಥವಾ

(ಡಿ) ಅವನನ್ನು ಆ ಪದದಲ್ಲಿ ಮುಂದುವರಿಸಿದರೆ, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗುವಂತೆ ತನ್ನ ಸ್ಥಾನವನ್ನು ಅವನು ದುರುಪಯೋಗಪಡಿಸಿಕೊಂಡಿರುವನೆಂದು ಸರ್ಕಾರವು ಅಭಿಪ್ರಾಯಪಟ್ಟರೆ:

ಪರಂತು, ಪ್ರಸ್ತಾಪಕ್ಕೆ ವಿರುದ್ಧವಾಗಿ ತನ್ನ ಮನವಿಯನ್ನು ಸಲ್ಲಿಸಲು ಯಾರೇ ಸದಸ್ಯನಿಗೇ ಅವಕಾಶವನ್ನು ಕೊಟ್ಟ ಹೊರತು, ಅವನನ್ನು ಈ ಖಂಡದ ಮೇರೆಗೆ ತೆಗೆದುಹಾಕತಕ್ಕದ್ದಲ್ಲ.

**9. ಮಂಡಲಿಯ ಸಭೆಗಳು.–** (1) ಮಂಡಲಿಯ ಸಭೆಗಳನ್ನು ಅಧ್ಯಕ್ಷನು ಕರೆಯತಕ್ಕದ್ದು ಮತ್ತು ಮಂಡಲಿಯ ಅಧಿಕಾರ ವ್ಯಾಪ್ತಿಯೊಳಗಿನ ಯಾವುದೇ ಸ್ಥಳದಲ್ಲಿ ಅವುಗಳನ್ನು ನಡೆಸತಕ್ಕದ್ದು.

(2) ಉಪವಿಧಿಗಳ ಮೂಲಕ ಉಪಬಂಧಿಸಬಹುದಾದಂಥ ಕಾಲಗಳಲ್ಲಿ ಮಂಡಲಿಯು ಸಭೆ ಸೇರತಕ್ಕದ್ದು ಮತ್ತು ತನ್ನ ಸಭೆಗಳಲ್ಲಿನ ಕಾರ್ಯಕಲಾಪಗಳ ಸಂಬಂಧದಲ್ಲಿ (ಕೋರಂ ಸೇರಿದಂತೆ) ಅಂಥ ಪ್ರಕ್ರಿಯೆಯ ನಿಯಮಗಳನ್ನು ಅನುಸರಿಸತಕ್ಕದ್ದು.

(3) ಅಧ್ಯಕ್ಷನು ಯಾವುದೇ ಕಾರಣಕ್ಕಾಗಿ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಆ ಸಭೆಯಲ್ಲಿ ಹಾಜರಿದ್ದ ಸದಸ್ಯರು ಆಯ್ಕೆ ಮಾಡುವ ಯಾರೇ ಇತರ ಸದಸ್ಯನು ಆ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(4) ಮಂಡಲಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು, ಸಭೆಯಲ್ಲಿ ಹಾಜರಿದ್ದು ಮತದಾನ ಮಾಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನವಾಗಿ ಮತಗಳು ಬಂದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕವಾದ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(5) ಮಂಡಲಿಯ ಯಾವುದೇ ಸಭೆಯಲ್ಲಿರುವ ಯಾವ ವಿಷಯದಲ್ಲಿ ಯಾರೇ ಸದಸ್ಯನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ, ಸ್ವಂತ ಅಥವಾ ತನ್ನ ಪಾಲುದಾರನ ಮೂಲಕ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವನೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಆ ವಿಷಯದ ಬಗ್ಗೆ ಮತವನ್ನು ಕೊಡತಕ್ಕದ್ದಲ್ಲ.

**10. ವ್ಯವಹರಣೆಗಳನ್ನು ಯುಕ್ತವೆಂದು ಮತ್ತು ಸಿಂಧುವೆಂದು ಪೂರ್ವಭಾವನೆ ಮಾಡತಕ್ಕದ್ದು.–** ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ನೇಮಕದಲ್ಲಿನ ಯಾವುದೇ ಅನರ್ಹತೆಯು ಅಥವಾ ದೋಷವು ಅಂಥ ಕಾರ್ಯವು ಅಥವಾ ವ್ಯವಹರಣೆಯು ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಇದ್ದರೆ, ಮಂಡಲಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ದೂಷಿತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**11. ಕರಾರುಗಳನ್ನು ಬರೆದುಕೊಡುವುದು.–** ಅಧ್ಯಕ್ಷನು, ಪ್ರತಿಯೊಂದು ಕರಾರನ್ನು ಮಂಡಲಿಯ ಪರವಾಗಿ ಮಾಡಿಕೊಳ್ಳತಕ್ಕದ್ದು:

(ಎ) ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರುವ ವೆಚ್ಚ ತಗಲುವ ಯಾವ ಕರಾರನ್ನೂ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಮಾಡಿಕೊಳ್ಳತಕ್ಕದ್ದಲ್ಲ;

(ಬಿ) (i) ಹತ್ತು ಸಾವಿರ ರೂಪಾಯಿಗಳನ್ನು ಮೀರುವ, ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದ ವೆಚ್ಚ ತಗಲುವ ಯಾವುದೇ ಕರಾರನ್ನೂ (i) (ಎ) ಖಂಡಕ್ಕೆ ಒಳಪಟ್ಟು, ಮಂಡಲಿಯ ಪೂರ್ವ ಮಂಜೂರಾತಿಯಿಲ್ಲದೆಯೇ ಮಾಡಿಕೊಳ್ಳತಕ್ಕದ್ದಲ್ಲ;

(ii) ಇಪ್ಪತ್ತೈದು ಸಾವಿರ ರೂಪಾಯಿಗಳ ಅಥವಾ ಹೆಚ್ಚಿನ ವೆಚ್ಚ ತಗಲುವ ಯಾವ ಅಂದಾಜನ್ನೂ ಅಥವಾ ಟೆಂಡರನ್ನೂ (ಎ) ಖಂಡಕ್ಕೆ ಒಳಪಟ್ಟು, ಮಂಡಲಿಯ ಪೂರ್ವ ಮಂಜೂರಾತಿಯಿಲ್ಲದೆಯೇ ಮಂಜೂರು ಮಾಡತಕ್ಕದ್ದಲ್ಲ ಅಥವಾ ಅಂಗೀಕರಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣವು ಕರಾರಿನ ಅಥವಾ ಅಂದಾಜಿನ ಪ್ರತಿಯೊಂದು ವ್ಯತ್ಯಾಸಕ್ಕೆ ಅಥವಾ ಅದನ್ನು ಬಿಟ್ಟು ಬಿಡುವುದಕ್ಕೆ ಅನ್ವಯವಾಗತಕ್ಕದ್ದು.

(3) ಅಧ್ಯಕ್ಷನು ಮಾಡಿಕೊಳ್ಳುವ ಪ್ರತಿಯೊಂದು ಕರಾರನ್ನು, ಮಂಡಲಿಯ ಅನುಮೋದನೆಗೊಳಪಟ್ಟು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಮಾಡಿಕೊಳ್ಳತಕ್ಕದ್ದು.

(4) ಈ ಪ್ರಕರಣದಲ್ಲಿ ಮತ್ತು ಇದರ ಮೇರೆಗೆ ರಚಿತವಾದ ನಿಯಮಗಳಲ್ಲಿ ಉಪಬಂಧಿಸಿರುವಂತೆ ಮಾಡಿಕೊಂಡಿರದ ಅಥವಾ ಬರೆದುಕೊಟ್ಟಿರದ ಯಾವುದೇ ಕರಾರು ಮಂಡಲಿಗೆ ಬಂಧನಕಾರಿಯಾಗಿರತಕ್ಕದ್ದಲ್ಲ.

**12. ಅಧ್ಯಕ್ಷನ ಕರ್ತವ್ಯಗಳು.–** ಅಧ್ಯಕ್ಷನು,–

(1) ಕಾಯಿಲೆಯ ಅಥವಾ ಇತರ ಸಮಂಜಸ ಕಾರಣದಿಂದಾಗಿ ಪ್ರತಿಬಂಧಿತನಾದ ಹೊರತು, ಮಂಡಲಿಯ ಪ್ರತಿಯೊಂದು ಸಭೆಯಲ್ಲೂ ಹಾಜರಿರತಕ್ಕದ್ದು;

(2) ಮಂಡಲಿಯ ಗೊತ್ತುವಳಿಗಳನ್ನು ಕಾರ್ಯಗತಗೊಳಿಸತಕ್ಕದ್ದು;

(3) ಮಂಡಲಿಯ ಪತ್ರ ವ್ಯವಹಾರಗಳನ್ನು ಇಡತಕ್ಕದ್ದು ಮತ್ತು ನಡೆಸತಕ್ಕದ್ದು;

(4) 13ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸರ್ಕಾರವು ಅಗತ್ಯಪಡಿಸಬಹುದಾದಂಥ ಯೋಜನೆಗಳನ್ನು ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು ಮತ್ತು ಅದಕ್ಕೆ ತಗಲಬಹುದಾದ ಅವಶ್ಯಕ ವೆಚ್ಚವನ್ನು ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು ವಹಿಸತಕ್ಕದ್ದು;

(5) ಮಂಡಲಿಯ ನಿರ್ವಹಣಾ ಆಡಳಿತದ ವಿಷಯಗಳಲ್ಲಿ ಮತ್ತು ಲೆಕ್ಕಪತ್ರಗಳಿಗೆ ಹಾಗೂ ದಾಖಲೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ, ಮಂಡಲಿಯ ಎಲ್ಲಾ ಅಧಿಕಾರಿಗಳ ಮತ್ತು ನೌಕರರ ಕಾರ್ಯಗಳ ಮತ್ತು ವ್ಯವಹರಣೆಗಳ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು. ಹಾಗೂ ಅವುಗಳನ್ನು ನಿಯಂತ್ರಿಸತಕ್ಕದ್ದು; ಮತ್ತು 54ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಷ್ಟರಮಟ್ಟಿಗೆ ಅಂಥ ಅಧಿಕಾರಿಗಳ ಮತ್ತು ನೌಕರರ ಸೇವಾ ಷರತ್ತುಗಳಿಗೆ ಮತ್ತು ಅವರ ವೇತನಕ್ಕೆ, ವಿಶೇಷ ಹಕ್ಕುಗಳಿಗೆ ಹಾಗೂ ಭತ್ಯೆಗಳಿಗೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳನ್ನು ವಿಲೆ ಮಾಡತಕ್ಕದ್ದು;

(6) ಮಂಡಲಿಯ ವ್ಯವಹರಣೆಗಳ ನಡವಳಿಕೆಗಳ ಪ್ರತಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಕೇಳಬಹುದಾದ ಯಾವುದೇ ವಿವರ ಪಟ್ಟಿಕೆಯನ್ನು ಅಥವಾ ಇತರೆ ಮಾಹಿತಿಯನ್ನು ಸಹ ಒದಗಿಸತಕ್ಕದ್ದು; ಮತ್ತು

(7) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ತನಗೆ ವಿಧಿಸಲಾದ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

## ಅಧ್ಯಾಯ – III
## ಕರ್ತವ್ಯಗಳು ಮತ್ತು ಅಧಿಕಾರಗಳು

**13. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಅಭಿವೃದ್ಧಿ, ಮೇಲ್ಪಾಟು ಇತ್ಯಾದಿಗಳ ವೆಚ್ಚವನ್ನು ವಹಿಸಲು ಮಂಡಲಿಗಿರುವ ಅಧಿಕಾರ.–** (1) ಮಂಡಲಿಯು, ಸರ್ಕಾರದ ನಿಯಂತ್ರಣಕ್ಕೊಳಪಟ್ಟು,–

(ಎ) ತನ್ನ ಪರಿಮಿತಿಗಳೊಳಗಿನ ಪ್ರದೇಶಗಳ ಅಭಿವೃದ್ಧಿಗಾಗಿ ಅಥವಾ ಮೇಲ್ಪಾಟಿಗಾಗಿ ಅಥವಾ ಇವೆರಡಕ್ಕಾಗಿಯೂ (ಇದರಲ್ಲಿ ಇನ್ನು ಮುಂದೆ "ಅಭಿವೃದ್ಧಿ ಯೋಜನೆಗಳು" ಅಥವಾ "ಮೇಲ್ಪಾಟು ಯೋಜನೆಗಳು" ಎಂದು ಉಲ್ಲೇಖಿತವಾಗುವ) ವಿವರವಾದ ಯೋಜನೆಗಳನ್ನು ರೂಪಿಸಿಕೊಳ್ಳಬಹುದು; ಮತ್ತು

(ಬಿ) ಕಾಲಕಾಲಕ್ಕೆ ಅವಶ್ಯವೆನಿಸಬಹುದಾದಂಥ ಅಭಿವೃದ್ಧಿ ಯೋಜನೆಗಳನ್ನು ಅಥವಾ ಮೇಲ್ಪಾಟು ಯೋಜನೆಗಳನ್ನು ಕೈಕೊಳ್ಳಬಹುದು ಹಾಗೂ ನಿರ್ವಹಿಸಬಹುದು ಮತ್ತು ಆ ಬಗೆಗಿನ ವೆಚ್ಚವನ್ನು ವಹಿಸಿಕೊಳ್ಳಬಹುದು.

(2) ಮಂಡಲಿಯು,–

(i) ತನ್ನ ಸಂಪನ್ಮೂಲಗಳಿಂದ ತಾನಾಗಿಯೇ; ಅಥವಾ

(ii) ಅಂಥ ಯಾವುವೇ ಯೋಜನೆಗಳನ್ನು ರೂಪಿಸಲು ಅಥವಾ ಕಾರ್ಯಗತಗೊಳಿಸಲು ಅವಶ್ಯವಿರುವ ನಿಧಿಯನ್ನು ಸ್ಥಳೀಯ ಪ್ರಾಧಿಕಾರವು ಮಂಡಲಿಯ ವಶಕ್ಕೆ ಕೊಟ್ಟರೆ, ಕಾಲಕಾಲಕ್ಕೆ ಯಾವುದೇ ಹೊಸ ಅಥವಾ ಹೆಚ್ಚಿನ ಅಭಿವೃದ್ಧಿ ಯೋಜನೆಗಳನ್ನು ಅಥವಾ ಮೇಲ್ಪಟ್ಟು ಯೋಜನೆಗಳನ್ನು ಸಹ ರಚಿಸಬಹುದು:

ಪರಂತು, (1)ನೇ ಪ್ರಕರಣದ (ವ) ಖಂಡದಲ್ಲಿ ಮತ್ತು ಈ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಮಂಡಲಿಯ ಯೋಜನೆಗಳನ್ನು, ಸಂಬಂಧಪಟ್ಟ ಪ್ರದೇಶದ ಯೋಜನಾ ಪ್ರಾಧಿಕಾರದ ಅಭಿವೃದ್ಧಿ ಯೋಜನೆಯ ರೂಪರೇಷೆಯು ಅಥವಾ ಸಮಗ್ರ ಅಭಿವೃದ್ಧಿ ಯೋಜನೆಯು, ಯಾವುದಾದರೂ ಇದ್ದರೆ, ಅದಕ್ಕೆ ಅನುಗುಣವಾಗಿ ತಯಾರಿಸತಕ್ಕದ್ದು.

(3) (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಆದರೆ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿತವಾದ ಅಭಿವೃದ್ಧಿ ಯೋಜನಾ ರೂಪರೇಷೆಗೆ ಅಥವಾ ಸಮಗ್ರ ಅಭಿವೃದ್ಧಿ ಯೋಜನೆಗೆ ಅನುಗುಣವಾಗಿರುವುದಕ್ಕೆ ಒಳಪಟ್ಟು, ಸರ್ಕಾರವು ತಾನು ಅವಶ್ಯಕವೆಂದು ಭಾವಿಸಿದಾಗ, ಯಾವುದೇ ಅಭಿವೃದ್ಧಿ ಯೋಜನೆಯನ್ನು ಮೇಲ್ಪಾಟು ಯೋಜನೆಯನ್ನು ಅಥವಾ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಮತ್ತು/ಅಥವಾ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ಅದನ್ನು ಕಾರ್ಯಗತಗೊಳಿಸಬೇಕೆಂದು ಮಂಡಲಿಯನ್ನು ಅಗತ್ಯಪಡಿಸಬಹುದು.

**14. ಅಭಿವೃದ್ಧಿ ಯೋಜನೆಯಲ್ಲಿ ಅಥವಾ ಮೇಲ್ಪಾಟು ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು.–** 13ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಅಭಿವೃದ್ಧಿ ಯೋಜನೆಯು ಅಥವಾ ಮೇಲ್ಪಾಟು ಯೋಜನೆಯು.–

(1) ಯೋಜನೆಯಲ್ಲಿ ಅಡಕವಾಗಿರುವ ಪ್ರದೇಶದ ಪರಿಮಿತಿಗಳೊಳಗೆ,–

(ಎ) ಯೋಜನೆಯನ್ನು ಕಾರ್ಯಗತಗೊಳಿಸಲು ಅವಶ್ಯಕವಾಗಿದೆಯೆಂದು ಮಂಡಲಿಯು ಅಭಿಪ್ರಾಯ ಪಡುವ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ;

(ಬಿ) ಕಟ್ಟಡಗಳ ನಿರ್ಮಾಣವನ್ನು ಮತ್ತು ಪುನರ್ನಿರ್ಮಾಣವನ್ನು ಹಾಗೂ ಬೀದಿಗಳ ರಚನೆಯನ್ನು ಮತ್ತು ಬದಲಾವಣೆಯನ್ನು ಒಳಗೊಂಡಂತೆ, ಎಲ್ಲ ಅಥವಾ ಯಾವುದೇ ಭೂಮಿಯ ರೂಪರೇಖೆಯನ್ನು ಸಿದ್ಧಗೊಳಿಸುವುದಕ್ಕೆ ಮತ್ತು ಪುನಃ ಸಿದ್ಧಗೊಳಿಸುವುದಕ್ಕೆ;

– ಉಪಬಂಧವನ್ನು ಕಲ್ಪಿಸತಕ್ಕದ್ದು.

(2) ಮೇಲೆ ಹೇಳಿದ ಪರಿಮಿತಿಗಳೊಳಗೆ,–

(ಎ) ಸ್ಥಳದ ಚರಂಡಿ ವ್ಯವಸ್ಥೆಯನ್ನು ಉತ್ತಮಗೊಳಿಸಲು ಯಾವುದೇ ಭೂಮಿಯನ್ನು ಎತ್ತರಿಸುವುದು ವಿಹಿತವೆಂದು ಮಂಡಲಿಯು ಭಾವಿಸಬಹುದಾದ ಯಾವುದೇ ಭೂಮಿಯನ್ನು ಎತ್ತರಿಸುವುದಕ್ಕಾಗಿ;

(ಬಿ) ಯೋಜನೆಯಲ್ಲಿ ಅಡಕವಾಗಿರುವ ಪ್ರದೇಶದ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ಪ್ರದೇಶದ ಉತ್ತಮ ವಾಯುಸಂಚಾರ ವ್ಯವಸ್ಥೆಗಾಗಿ ಬಯಲು ಜಾಗವನ್ನು ಬಿಡುವುದಕ್ಕಾಗಿ ;

(ಸಿ) ಅಗತ್ಯವಾದ ಪೂರ್ಣ ನೈರ್ಮಲ್ಯ ವ್ಯವಸ್ಥೆಯ ಅಥವಾ ಅದರ ಭಾಗದ ಬಗ್ಗೆ;

(ಡಿ) ಉದ್ಯಾನವನಗಳು, ಆಟದ ಮೈದಾನಗಳು, ಕ್ರೀಡಾಂಗಣ, ವಿಹಾರ ಸ್ಥಾನಗಳು, ಶಾಲಾ ಕಟ್ಟಡಗಳು, ಮಾರುಕಟ್ಟೆಗಳು, ಮೋಟಾರು ವಾಹನ ನಿಲ್ದಾಣಗಳು, ರಂಗ ಮಂದಿರಗಳು, ಪೊಲೀಸು ಠಾಣೆಗಳು, ಅಂಚೆ ಕಛೇರಿಗಳು, ಸಹಕಾರೀ ಸಂಘಗಳು, ಸಾರ್ವಜನಿಕ ಮೂತ್ರಿಗಳು ಹಾಗೂ ಶೌಚಗೃಹಗಳು, ಪೆಟ್ರೋಲು ಸರಬರಾಜು ಕೇಂದ್ರಗಳು, ಆಸ್ಪತ್ರೆಗಳು, ಔಷಧಾಲಯಗಳು, ಬ್ಯಾಂಕುಗಳು, ಸ್ಮಶಾನ ಮತ್ತು ಸುಡುಗಾಡು – ಇವುಗಳಿಗಾಗಿ ನಿವೇಶನಗಳ ಬಗ್ಗೆ ಮತ್ತು ಇತರ ಬಗೆಯ ಸಾರ್ವಜನಿಕ ಉದ್ದೇಶಗಳಿಗಾಗಿ ನಿವೇಶನಗಳ ಬಗ್ಗೆ,

– ಉಪಬಂಧವನ್ನು ಕಲ್ಪಿಸಬಹುದು.

(3) ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಸ್ಥಳಾಂತರಿಸಬೇಕಾದ ವ್ಯಕ್ತಿಗಳಿಗೆ ಸ್ಥಳಾವಕಾಶವನ್ನೊದಗಿಸುವುದಕ್ಕಾಗಿ ಮನೆಗಳನ್ನು ನಿರ್ಮಿಸಲು, ಮೇಲೆ ಹೇಳಿದ ಪರಿಮಿತಿಗಳೊಳಗೆ ಉಪಬಂಧವನ್ನು ಕಲ್ಪಿಸಬಹುದು ಮತ್ತು ಅಂಥ ಸ್ಥಳಾವಕಾಶವು ಅಂಗಡಿಗಳನ್ನು ಒಳಗೊಳ್ಳುತ್ತದೆ ಎಂದು ಭಾವಿಸತಕ್ಕದ್ದು;

**15. ಯೋಜನೆಯನ್ನು ತಯಾರಿಸಿದ ನಂತರದ ಪ್ರಕ್ರಿಯೆ.–** (1) ಯಾವುದೇ ಅಭಿವೃದ್ಧಿ ಯೋಜನೆಯನ್ನು ಅಥವಾ ಮೇಲ್ಪಾಟು ಯೋಜನೆಯನ್ನು ತಯಾರಿಸುವಾಗ, ಯೋಜನೆಯನ್ನು ತಯಾರಿಸಲಾಗಿರುವ ಸಂಗತಿಯನ್ನು ನಿರೂಪಿಸಿದ ಮತ್ತು ಯೋಜನೆಯ ವಿವರಗಳನ್ನು ಅದರಲ್ಲಿ ಅಡಕವಾಗಿರುವ ಪ್ರದೇಶದ ನಕ್ಷೆಯನ್ನು ಮತ್ತು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಭೂಮಿಯನ್ನು ನಿರ್ದಿಷ್ಟಪಡಿಸುವ ಹಾಗೂ ಯಾವ ಭೂಮಿಯ ಬಗ್ಗೆ ಅಭಿವೃದ್ಧಿ ತೆರಿಗೆಯನ್ನು ವಸೂಲು ಮಾಡಲು ಉದ್ದೇಶಿಸಲಾಗಿದೆಯೋ ಆ ಭೂಮಿಯ ವಿವರ ಪತ್ರವನ್ನು ಯಾವ ಸ್ಥಳದಲ್ಲಿ ಎಲ್ಲ ಯುಕ್ತ ಕಾಲಗಳಲ್ಲೂ ಕಾಣಬಹುದೋ ಆ ಸ್ಥಳವನ್ನು ಹೆಸರಿಸಿ ಒಂದು ಅಧಿಸೂಚನೆಯ ಕರಡನ್ನು ತಯಾರಿಸತಕ್ಕದ್ದು; ಮತ್ತು,–

(ಎ) ಅಂಥ ಅಧಿಸೂಚನೆಯ ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅದು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ, ಯೋಜನೆಯ ಬಗ್ಗೆ ಸಲ್ಲಿಸುವುದು ಸೂಕ್ತವೆಂದು ಸ್ಥಳೀಯ ಪ್ರಾಧಿಕಾರವು ಭಾವಿಸುವ ಯಾವುದೇ ಮನವಿಯನ್ನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಂತೆ, ಸರ್ಕಾರಕ್ಕೆ ರವಾನಿಸುವುದಕ್ಕಾಗಿ, ಮಂಡಲಿಗೆ ಕಳುಹಿಸತಕ್ಕದ್ದು; ಮತ್ತು

(ಬಿ) ಸದರಿ ಅಧಿಸೂಚನೆಯ ಪ್ರತಿಯನ್ನು ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸುವಂತೆ ಮತ್ತು ಮಂಡಲಿಯ ಕಚೇರಿಯ, ಡೆಪ್ಯುಟಿ ಕಮೀಷನರ ಕಚೇರಿಯ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಕಚೇರಿಯ, ಎದ್ದು ಕಾಣುವ ಭಾಗದಲ್ಲಿ ಮತ್ತು ಮಂಡಲಿಯು ಅವಶ್ಯವೆಂದು ಭಾವಿಸಬಹುದಾದಂಥಹ ಸ್ಥಳಗಳಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗಿನ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸ್ಥಳೀಯ ಪ್ರಾಧಿಕಾರದಿಂದ ಮನವಿಯು ಬಾರದಿದ್ದಲ್ಲಿ, ಸ್ಥಳೀಯ ಪ್ರಾಧಿಕಾರವು ಆ ಪ್ರಸ್ತಾಪಕ್ಕೆ ಸಹಮತಿಯನ್ನು ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

(3) ಸರ್ಕಾರಿ ರಾಜ್ಯಪತ್ರದಲ್ಲಿ ಅಂಥ ಅಧಿಸೂಚನೆಯು ಪ್ರಕಟವಾದ ದಿನದಂದ ನಿಕಟ ತರುವಾಯದ ಮೂವತ್ತು ದಿನಗಳ ಅವಧಿಯಲ್ಲಿ, ಯೋಜನೆಯಲ್ಲಿ ಅಡಕವಾಗಿರುವ ಪ್ರದೇಶವು ಯಾವ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಇದೆಯೋ ಆ ಸ್ಥಳೀಯ ಪ್ರಾಧಿಕಾರದ ಕರ ನಿರ್ಧಾರಣೆಯ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ ಹೆಸರು ಇರುವ ಪ್ರತಿಯೊಬ್ಬ ವ್ಯಕ್ತಿಗೆ ಆ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಯಾವುದೇ ಕಟ್ಟಡದ ಅಥವಾ ಭೂಮಿಯ ಬಗ್ಗೆ ಸ್ವತ್ತು ತೆರಿಗೆಯನ್ನು ಅಥವಾ ಭೂ ಕಂದಾಯವನ್ನು ಸಂದಾಯ ಮಾಡಲು ಅವನು ಪ್ರಥಮತಃ ಹೊಣೆಗಾರನಾಗಿರುವನೆಂದು ನೋಟೀಸನ್ನು ಜಾರಿ ಮಾಡತಕ್ಕದ್ದು ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾಗಿರುವ ಕಟ್ಟಡವನ್ನು ಅಥವಾ ಆ ಭೂಮಿಯನ್ನು ಏಕೆ ಸ್ವಾಧೀನಪಡಿಸಿಕೊಳ್ಳಬಾರದೆಂಬುದಕ್ಕೆ ಮತ್ತು ಪುರೋಭಿವೃದ್ಧಿ ತೆರಿಗೆಯನ್ನು ಏಕೆ ವಸೂಲ್ಮಾಡಬಾರದೆಂಬುದಕ್ಕೆ ಮೂವತ್ತು ದಿನಗಳೊಳಗೆ ಕಾರಣವನ್ನು ತೋರಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು.

**16. ಯೋಜನೆಯನ್ನು ಕಳಿಸುವುದು:–** (1) ಯೋಜನೆಯ ನೋಟೀಸಿನ ಪ್ರಕಟಣೆಗೆ ಮತ್ತು ಜಾರಿಗೆ ಸಂಬಂಧಿಸಿದ ಹಿಂದಿನ ಉಪ ಬಂಧಗಳನ್ನು ಪಾಲಿಸಿದ ಮೇಲೆ, ಮಂಡಲಿಯು 15ನೇ ಪ್ರಕರಣದ ಮೇರೆಗೆ ಸ್ವೀಕರಿಸಿದ ಯಾವುದೇ ಮನವಿಯನ್ನು ಪರ್ಯಾಲೋಚಿಸಿದ ಅನಂತರ ಮತ್ತು ಸೂಕ್ತವೆಂದು ಭಾವಿಸಬಹುದಾದ ಮಾರ್ಪಾಟುಗಳನ್ನು ಆ ಯೋಜನೆಗಳಲ್ಲಿ ಮಾಡಿದ ಅನಂತರ ಯೋಜನೆಯ ಮಂಜೂರಾತಿಗಾಗಿ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) (3)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವ ಸಂದರ್ಭದಲ್ಲಿ ಹೊರತು, ಮಂಜೂರಾತಿಗಾಗಿ ಸಲ್ಲಿಸುವ ಅರ್ಜಿಯ ಜತೆಗೆ ಕೆಳಕಂಡವು ಇರತಕ್ಕದ್ದು:–

(ಎ) ಯೋಜನೆಯಲ್ಲಿ ಮಾಡಲಾಗಿರುವ ಯಾವುವೇ ಮಾರ್ಪಾಟುಗಳ ಕಾರಣಗಳೊಂದಿಗೆ ಯೋಜನೆಯ ಪೂರ್ಣ ವಿವರಗಳನ್ನೊಳಗೊಂಡ ವರ್ಣನೆ;

(ಬಿ) ಎಲ್ಲಾ ನಕ್ಷೆಗಳು ಮತ್ತು ಯೋಜನೆಯನ್ನು ಕಾರ್ಯಗತಗೊಳಿಸುವ ಬಗೆಗಿನ ಖರ್ಚಿನ ಅಂದಾಜು;

(ಸಿ) ಸ್ವಾಧೀನಪಡಿಸಿಕೊಳ್ಳಬೇಕೆಂದು ಉದ್ದೇಶಿಸಲಾಗಿರುವ ಭೂಮಿಯನ್ನು ನಿರ್ದಿಷ್ಟಪಡಿಸುವ ವಿವರಪತ್ರ;

(ಡಿ) 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಲಾದ ಯಾವುದೇ ಮನವಿ;

(ಇ) 15ನೇ ಪ್ರಕರಣದ ಮೇರೆಗಿನ ಭೂಮಿಗೆ ಸಂಬಂಧಪಟ್ಟಂತೆ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಂದು ಸ್ಥಳೀಯ ಪ್ರಾಧಿಕಾರದ ನಿರ್ಧರಣಾಪಟ್ಟಿಯಲ್ಲಿ ನಮೂದಿಸಲಾಗಿರುವ ಕರಾಧಾರ ಮೌಲ್ಯವನ್ನು ಅಥವಾ (ಸಿ) ಖಂಡದ ವಿವರಣೆಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಎಲ್ಲ ಭೂಮಿಯ ಭೂಕಂದಾಯ ನಿರ್ಧರಣೆಯನ್ನು ತೋರಿಸುವ ಅನುಸೂಚಿ; ಮತ್ತು

(ಎಫ್) ನಿಯಮಿಸಬಹುದಾದಂಥ ಹೆಚ್ಚಿನ ವಿವರಗಳು, ಯಾವುದಾದರೂ ಇದ್ದರೆ.

(3) ಯಾವುದೇ ಅಭಿವೃದ್ಧಿ ಯೋಜನೆಯ ಅಥವಾ ಮೇಲ್ಪಾಟು ಯೋಜನೆಯ ಮೇರೆಗೆ, ಗೃಹಗಳ ನಿರ್ಮಾಣಕ್ಕಾಗಿ ಉಪಬಂಧವನ್ನು ಕಲ್ಪಿಸಿರುವಲ್ಲಿ, ಮಂಡಲಿಯು 15ನೇ ಪ್ರಕರಣದ ಉಪಬಂಧವನ್ನು ಪಾಲಿಸಿದ ಅನಂತರ, ಅಂಥ ಗೃಹಗಳ ನಿರ್ಮಾಣಕ್ಕಾಗಿ ನಕ್ಷೆಗಳನ್ನು ಮತ್ತು ಅಂದಾಜುಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಕಳುಹಿಸಿಕೊಡಬಹುದು ಮತ್ತು ಅಂಥ ಮಂಜೂರಾತಿಯು ಬಂದ ಮೇಲೆ, 17ನೇ ಪ್ರಕರಣದ ಉಪಬಂಧಗಳು ಎಲ್ಲಾ ಅವಶ್ಯಕ ಮಾರ್ಪಾಟುಗಳೊಂದಿಗೆ, ಅಂಥ ಗೃಹಗಳ ನಿರ್ಮಾಣಕ್ಕಾಗಿ ಉಪಬಂಧಿಸುವ ಯೋಜನೆಯ ಭಾಗಕ್ಕೆ ಅಂಥ ಭಾಗವು ಆ ಯೋಜನೆಯಾಗಿದ್ದರೆ ಹೇಗೋ ಹಾಗೆ, ಅನ್ವಯವಾಗತಕ್ಕದ್ದು.

**17. ಯೋಜನೆಗೆ ಮಂಜೂರಾತಿ ಮತ್ತು ಮಾರ್ಪಾಟಿನ ಸಂದರ್ಭದಲ್ಲಿ ಪುನರ್ ಪ್ರಕಟಣೆ.–** (1) 16ನೇ ಪ್ರಕರಣದ ಮೇರೆಗೆ ತನಗೆ ಒಪ್ಪಿಸಲಾದ ಅಭಿವೃದ್ಧಿ ಯೋಜನೆಯನ್ನು ಅಥವಾ ಮೇಲ್ಪಾಟು ಯೋಜನೆಯನ್ನು ಮಾರ್ಪಾಟು ಮಾಡಿ ಅಥವಾ ಮಾರ್ಪಾಟು ಮಾಡದೆಯೇ ಸರ್ಕಾರವು ಮಂಜೂರ್ಮಾಡಬಹುದು ಅಥವಾ ಮಂಜೂರ್ಮಾಡಲು ಇಂಕಾರ ಮಾಡಬಹುದು ಅಥವಾ ಪುನರ್ ಪರ್ಯಾಲೋಚನೆಗಾಗಿ ವಾಪಸು ಕಳುಹಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಪುನರ್ ಪರ್ಯಾಲೋಚನೆಗಾಗಿ ವಾಪಸ್ಸು ಕಳುಹಿಸಲಾದ ಯೋಜನೆಯನ್ನು ಮಂಡಲಿಯು ಮಾರ್ಪಾಟು ಮಾಡಿದರೆ ಆ ಯೋಜನೆಯಲ್ಲಿ ಅಡಕವಾಗಿರುವ ಪ್ರದೇಶದ ಚಕ್ಕುಬಂದಿಗಳಿಗೆ ಆ ಮಾರ್ಪಾಟು ಬಾಧಕವಾದರೆ ಅಥವಾ ಈ ಹಿಂದೆ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರದ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಒಳಗೊಂಡಿದ್ದರೆ ಯೋಜನೆಯನ್ನು 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು.

**18 ಮಂಜೂರಾದ ಮೇಲೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ವಿವರಗಳನ್ನು ಕೊಡುವ ಘೋಷಣೆಯನ್ನು ಪ್ರಕಟಿಸತಕ್ಕದ್ದು.–** (1) ಯೋಜನೆಯು ಮಂಜೂರಾದ ಮೇಲೆ, ಹಾಗೆ ಮಂಜೂರಾದ ಸಂಗತಿಯನ್ನು ಮತ್ತು ಯೋಜನೆಯ ಉದ್ದೇಶಗಳಿಗಾಗಿ ಮಂಡಲಿಯು ಸ್ವಾಧೀನಪಡಿಸಿಕೊಳ್ಳಬೇಕೆಂದು ಉದ್ದೇಶಿಸಿರುವ ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂಬುದನ್ನು ನಿರೂಪಿಸುವ ಘೋಷಣೆಯನ್ನು ಸರ್ಕಾರವು ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

(2) ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿರುವ ಭೂಮಿಯು ಇರುವ ಸ್ಥಳದ ಪರಿಮಿತಿಗಳನ್ನು ಯಾವ ಉದ್ದೇಶಕ್ಕಾಗಿ ಅದು ಅಗತ್ಯವಿದೆ ಎಂಬುದನ್ನು ಅದರ ಅಂದಾಜು ವಿಸ್ತೀರ್ಣವನ್ನು ಹಾಗೂ ಭೂಮಿಯ ನಕ್ಷೆಯನ್ನು ಪರಿಶೀಲಿಸಬಹುದಾದ ಸ್ಥಳವನ್ನು ಘೋಷಣೆಯಲ್ಲಿ ನಿರೂಪಿಸತಕ್ಕದ್ದು.

(3) ಆ ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂಬ ಬಗ್ಗೆ ಸದರಿ ಘೋಷಣೆಯ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು ಮತ್ತು ಸದರಿ ಘೋಷಣೆಯು ಪ್ರಕಟವಾದ ಮೇಲೆ, ಆ ಯೋಜನೆಯನ್ನು ಕಾರ್ಯಗತಗೊಳಿಸಲು ಮಂಡಲಿಯು ಉದ್ಯುಕ್ತವಾಗತಕ್ಕದ್ದು.

(4) ಯೋಜನೆಯ ಯಾವುದೇ ಭಾಗದಲ್ಲಿ ಮೇಲ್ಪಾಟನ್ನು ಮಾಡಬಹುದೆಂಬುದಾಗಿ ಯಾವುದೇ ಕಾಲದಲ್ಲಿ ಮಂಡಲಿಗೆ ಕಂಡುಬಂದರೆ, ಅಂಥ ಮೇಲ್ಪಾಟನ್ನು ಮಾಡುವ ಉದ್ದೇಶಕ್ಕಾಗಿ ಮಂಡಲಿಯು ಆ ಯೋಜನೆಯನ್ನು ವ್ಯತ್ಯಾಸಗೊಳಿಸಬಹುದು ಮತ್ತು ವ್ಯತ್ಯಾಸಗೊಂಡ ಯೋಜನೆಯನ್ನು (5) ಮತ್ತು (6)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಕೂಡಲೇ ಕಾರ್ಯಗತಗೊಳಿಸಲು ಉದ್ಯುಕ್ತವಾಗತಕ್ಕದ್ದು.

(5) ಹಾಗೆ ವ್ಯತ್ಯಾಸಗೊಳಿಸಲಾದ ಯೋಜನೆಯನ್ನು ಕಾರ್ಯಗತಗೊಳಿಸುವ ಅಂದಾಜು ಖರ್ಚು, ಮಂಜೂರಾದ ಯೋಜನೆಯನ್ನು ಕಾರ್ಯಗತಗೊಳಿಸಲು ಆಗುವ ಅಂದಾಜು ವೆಚ್ಚಕ್ಕಿಂತ ಶೇಕಡ 5ರಷ್ಟು ಹೆಚ್ಚಾದರೆ, ಹಾಗೆ ವ್ಯತ್ಯಾಸಗೊಳಿಸಲಾದ ಯೋಜನೆಯನ್ನು ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ, ಕಾರ್ಯಗತಗೊಳಿಸಲು ಮಂಡಲಿಯು ಉದ್ಯುಕ್ತವಾಗತಕ್ಕದ್ದಲ್ಲ.

(6) 16ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿತವಾದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದುದಲ್ಲದೆ ಇತರ ಯಾವುದೇ ಭೂಮಿಯನ್ನು ಒಪ್ಪಂದದ ಮೂಲಕವಲ್ಲದೆ, ಅನ್ಯಥಾ ಸ್ವಾಧೀನಪಡಿಸಿಕೊಳ್ಳುವುದನ್ನು ಹಾಗೆ ವ್ಯತ್ಯಾಸಗೊಳಿಸಲಾದ ಯೋಜನೆಯು ಒಳಗೊಂಡಿದ್ದರೆ, 15 ಮತ್ತು 16ನೇ ಪ್ರಕರಣಗಳ ಮತ್ತು ಈ ಪ್ರಕರಣದ (1)ನೇ ಉಪಪ್ರಕರಣಗಳ ಉಪಬಂಧಗಳು ಹಾಗೆ ವ್ಯತ್ಯಾಸಗೊಳಿಸಲಾದ ಯೋಜನೆಯ ಭಾಗಕ್ಕೆ, ಹಾಗೆ ವ್ಯತ್ಯಾಸಗೊಳಿಸಲಾದ ಭಾಗವು ಯೋಜನೆಯಾಗಿದ್ದರೆ ಹೇಗೋ ಅನ್ವಯವಾಗತಕ್ಕದ್ದು.

**19. ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸುವುದು.–** (1) ಯಾವುದೇ ಅಭಿವೃದ್ಧಿ ಯೋಜನೆಯನ್ನು ಅಥವಾ ಮೇಲ್ಪಾಟು ಯೋಜನೆಯನ್ನು ಕಾರ್ಯಗತಗೊಳಿಸುವುದರ ಪರಿಣಾಮವಾಗಿ, ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಿರದ ಆದರೆ ಯೋಜನೆಯಲ್ಲಿ ಅಡಕವಾಗಿರದ ಪ್ರದೇಶದಲ್ಲಿನ ಯಾವುದೇ ಭೂಮಿಯ ಮಾರುಕಟ್ಟೆ ಮೌಲ್ಯವು ಹೆಚ್ಚಾಗಿದೆ ಎಂದು ಅಥವಾ ಹೆಚ್ಚಾಗುವುದೆಂದು ಮಂಡಲಿಯು ಅಭಿಪ್ರಾಯಪಟ್ಟಲ್ಲಿ ಅಂಥ ಯೋಜನೆಯನ್ನು ಕಾರ್ಯಗತಗೊಳಿಸಿರುವುದರಿಂದಾಗಿ ಭೂಮಿಯ ಮೌಲ್ಯವು ಹೆಚ್ಚಿದ ಬಗ್ಗೆ ತೆರಿಗೆಯನ್ನು ಆ ಭೂಮಿಯ ಒಡೆಯನಿಗೆ ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಗೆ ಪುರೋಭಿವೃದ್ಧಿ ತೆರಿಗೆಯನ್ನು ವಿಧಿಸಲು ಮಂಡಲಿಗೆ ಹಕ್ಕಿರತಕ್ಕದ್ದು.

(2) ಮೌಲ್ಯದಲ್ಲಿನ ಅಂಥ ಹೆಚ್ಚಳವು, ಯೋಜನೆಯನ್ನು ಪೂರ್ಣವಾಗಿ ಕಾರ್ಯಗತಗೊಳಿಸಿದ ಬಳಿಕ, ಆ ಭೂಮಿಯ ಮೇಲೆ ಕಟ್ಟಡಗಳು ಇಲ್ಲದಿರುತ್ತಿದ್ದರೆ ಹೇಗೋ ಹಾಗೆ ಅಂದಾಜು ಮಾಡಬಹುದಾದ ಭೂಮಿಯ ಮೌಲ್ಯವು, ಯೋಜನೆಯನ್ನು ಕಾರ್ಯಗತಗೊಳಿಸುವ ಮುಂಚೆ ಇದೇ ರೀತಿಯಲ್ಲಿ ಅಂದಾಜು ಮಾಡಲಾದ ಭೂಮಿಯ ಮೌಲ್ಯಕ್ಕಿಂತ ಎಷ್ಟು ಹೆಚ್ಚಾಗುತ್ತದೋ ಅಷ್ಟು ಮೊಬಲಗು ಆಗಿರತಕ್ಕದ್ದು ಮತ್ತು ಪುರೋಭಿವೃದ್ಧಿ ತೆರಿಗೆಯು ಅಂಥ ಮೌಲ್ಯದಲ್ಲಿ ಆದ ಹೆಚ್ಚಳದ ಮೂರನೇ ಒಂದರಷ್ಟಾಗಿರತಕ್ಕದ್ದು.

**20. ಮಂಡಲಿಯಿಂದ ಪುರೋಭಿವೃದ್ಧಿ ತೆರಿಗೆಯ ನಿರ್ಧಾರಣೆ.–** (1) ಪುರೋಭಿವೃದ್ಧಿ ತೆರಿಗೆಯ ಮೊಬಲಗನ್ನು ನಿರ್ಧರಿಸುವಷ್ಟರಮಟ್ಟಿಗೆ ಯಾವುದೇ ಅಭಿವೃದ್ಧಿ ಅಥವಾ ಮೇಲ್ಪಾಟು ಯೋಜನೆಯ ಸಾಕಷ್ಟು ಮುಂದುವರಿದಿದೆ ಎಂಬುದಾಗಿ ಮಂಡಲಿಗೆ ಕಂಡುಬಂದಾಗ, ಪುರೋಭಿವೃದ್ಧಿ ತೆರಿಗೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಯೋಜನೆಯ ಕಾರ್ಯನಿರ್ವಹಣೆಯು ಪೂರ್ಣವಾಗಿದೆಯೆಂದು ಭಾವಿಸತಕ್ಕದ್ದು ಎಂದು, ಈ ಬಗ್ಗೆ ಮಾಡಲಾಗುವ ಆದೇಶದ ಮೂಲಕ, ಮಂಡಲಿಯು ಘೋಷಿಸಬಹುದು ಮತ್ತು ತದನಂತರ, ಅಂಥ ಸ್ವತ್ತಿನ ಸಂಬಂಧದಲ್ಲಿ 19ನೇ ಪ್ರಕರಣದ ಮೇರೆಗೆ ಅಭಿವೃದ್ಧಿ ತೆರಿಗೆಯ ಮೊತ್ತವನ್ನು ನಿರ್ಧರಿಸಲು ಮಂಡಲಿಯು ಉದ್ದೇಶಿಸಿದೆಯೆಂದು ಸ್ವತ್ತಿನ ಒಡೆಯನಿಗೆ ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಗೆ ಲಿಖಿತ ನೋಟೀಸುಕೊಡತಕ್ಕದ್ದು.

(2) ಆಮೇಲೆ ಮಂಡಲಿಯು, ತನ್ನ ಅಹವಾಲನ್ನು ಹೇಳಿಕೊಳ್ಳಲು ಸಂಬಂಧಪಟ್ಟ ವ್ಯಕ್ತಿಗೆ ಅವಕಾಶ ಕೊಟ್ಟ ಅನಂತರ, ಆ ವ್ಯಕ್ತಿಯು ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ತೆರಿಗೆಯ ಮೊಬಲಗನ್ನು ನಿರ್ಧರಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಅಂಥ ನಿರ್ಧರಣೆಯ ಬಗ್ಗೆ ಮಂಡಲಿಯಿಂದ ಲಿಖಿತ ನೋಟೀಸು ಬಂದ ದಿನಾಂಕದಿಂದ ಆರು ದಿನಗಳೊಳಗೆ, ಕರನಿರ್ಧಾರಣೆಯನ್ನು ತಾನು ಒಪ್ಪಿಕೊಂಡಿರುವನೇ ಅಥವಾ ಇಲ್ಲವೇ ಎಂಬುದನ್ನು ಮಂಡಲಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು.

(3) ಮಂಡಲಿಯು ಪ್ರಸ್ತಾವಿಸಿದ ತೆರಿಗೆ ನಿರ್ಧರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಅವಧಿಯೊಳಗೆ ಒಪ್ಪಿಕೊಂಡಾಗ, ಅಂಥ ತೆರಿಗೆ ನಿರ್ಧರಣೆಯು ಅಂತಿಮವಾದುದಾಗಿರತಕ್ಕದ್ದು.

(4) ಆ ನಿರ್ಧರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು ಒಪ್ಪಿಕೊಳ್ಳದಿದ್ದರೆ ಅಥವಾ (2)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾಗಿರುವ ಮಾಹಿತಿಯನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮಂಡಲಿಗೆ ಕೊಡಲು ವಿಫಲನಾದರೆ, ಅಂಥ ವ್ಯಕ್ತಿಯು ಸಂದಾಯ ಮಾಡಬೇಕಾದ ಪುರೋಭಿವೃದ್ಧಿ ತೆರಿಗೆಯನ್ನು ನಿರ್ಧರಿಸುವುದಕ್ಕಾಗಿ ಮಂಡಲಿಯ ಜಿಲ್ಲಾ ನ್ಯಾಯಾಲಯಕ್ಕೆ ಆ ವಿಷಯವನ್ನು ಕಳುಹಿಸತಕ್ಕದ್ದು.

**21. ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡುವ ರೀತಿ.–** 20ನೇ ಪ್ರಕರಣದ ಮೇರೆಗೆ ನಿರ್ಧರಿಸಲಾಗಿರುವ ಪುರೋಭಿವೃದ್ಧಿ ತೆರಿಗೆಯನ್ನು ನಿಯಮಿಸಬಹುದಾದ ದರದ ಬಡ್ಡಿಯ ಜೊತೆಗೆ ಮಂಡಲಿಯು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಹತ್ತಕ್ಕೆ ಮೀರದಷ್ಟು ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು.

**22. ಪುರೋಭಿವೃದ್ಧಿ ತೆರಿಗೆಯ ವಸೂಲಿ.–** ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಯಾರೇ ವ್ಯಕ್ತಿಯು ಮಂಡಲಿಯು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದನ್ನು ಸಂದಾಯ ಮಾಡಲು ವಿಫಲನಾದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಕಂತುಗಳನ್ನು ಅಥವಾ ಯಾವುದೇ ಮೂರು ಕಂತುಗಳನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಕರ್ನಾಟಕ ಪುರಸಭಾ ಅಧಿನಿಯಮ, 1964ರ VIIನೇ ಅಧ್ಯಾಯದಲ್ಲಿ ತೆರಿಗೆಗಳ ವಸೂಲಿಯ ಬಗ್ಗೆ ಉಪಬಂಧಿಸಲಾಗಿರುವ ರೀತಿಯಲ್ಲಿ ಬರಬೇಕಾಗಿರುವ ಪೂರ್ಣ ಮೊಬಲಗನ್ನು ಬಡ್ಡಿ ಸಹಿತವಾಗಿ ಸದರಿ ವ್ಯಕ್ತಿಯಿಂದ ಅಥವಾ ಅಂಥ ಭೂಮಿಯಲ್ಲಿನ ಹಿತಾಸಕ್ತಿಗೆ ಆತನ ಉತ್ತರಾಧಿಕಾರಿಯಾಗಿರುವವನಿಂದ ವಸೂಲು ಮಾಡಲು ಮಂಡಲಿಗೆ ಹಕ್ಕಿರತಕ್ಕದ್ದು ಮತ್ತು ಸದರಿ ಹಣವನ್ನು ಹಾಗೆ ವಸೂಲು ಮಾಡದಿದ್ದರೆ, ಹಾಗೆ ಮಾಡಬೇಕೆಂಬ ತನ್ನ ಉದ್ದೇಶದ ಬಗ್ಗೆ ಅಧ್ಯಕ್ಷನು ಬಹಿರಂಗ ನೋಟೀಸನ್ನು ಕೊಟ್ಟ ಅನಂತರ, ಮತ್ತು ಅಂಥ ನೋಟೀಸಿನ ಪ್ರಕಟಣೆಯ ಅನಂತರ ಒಂದು ತಿಂಗಳಿಗೆ ಕಡಿಮೆಯಾಗಿರದ ಕಾಲದಲ್ಲಿ ಆ ಭೂಮಿಯನ್ನು ಅಥವಾ ಅಂಥಭೂಮಿಯಲ್ಲಿ ಸದರಿ ವ್ಯಕ್ತಿಗೆ ಅಥವಾ ಅದರ ಹಿತಾಸಕ್ತಿಯಲ್ಲಿನ ಅವನ ಉತ್ತರಾಧಿಕಾರಿಗೆ ಇರುವ ಹಿತಾಸಕ್ತಿಯನ್ನು ಬಹಿರಂಗ ಹರಾಜಿನ ಮೂಲಕ ಮಾರಬಹುದು ಮತ್ತು ಮಾರಾಟದ ಉತ್ಪತ್ತಿಯಿಂದ ಸದರಿ ಹಣವನ್ನು ಹಾಗೂ ಮಾರಾಟದ ವೆಚ್ಚಗಳನ್ನು ಮುರಿದುಕೊಳ್ಳಬಹುದು ಮತ್ತು ಬಾಕಿ ಏನಾದರು ಉಳಿದರೆ ಅದನ್ನು ಆ ತಪ್ಪಿದವನಿಗೆ ಸಂದಾಯ ಮಾಡತಕ್ಕದ್ದು.

**23. ಹೊಸ ಘೋಷಣೆಯ ಮೇರೆಗೆ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಹಣ ಸಂದಾಯ ಮಾಡುವುದು ಪ್ರತಿಬಂಧಕವಲ್ಲ.–** ಯಾವ ಭೂಮಿಯ ಸಂಬಂಧದಲ್ಲಿ ಪುರೋಭಿವೃದ್ಧಿ ತೆರಿಗೆಯ ಸಂದಾಯವನ್ನು 20ನೇ ಪ್ರಕರಣದ ಮೇರೆಗೆ ಒಪ್ಪಿಕೊಳ್ಳಲಾಗಿದೆಯೋ ಅಥವಾ ನಿರ್ಧರಿಸಲಾಗಿದೆಯೋ ಅಂಥ ಯಾವುದೇ ಭೂಮಿಯು ಈ ಅಧಿನಿಯಮದ ಉದ್ದೇಶಗಳ ಪೈಕಿ ಯಾವುದೇ ಉದ್ದೇಶಕ್ಕಾಗಿ ತರುವಾಯ ಅಗತ್ಯವಾಗಿದ್ದರೆ, ಆ ಒಪ್ಪಿಗೆಯು ಅಥವಾ ಹಣ ಸಂದಾಯವು ಭೂಸ್ವಾಧೀನ ಅಧಿನಿಯಮ, 1964ರ 6ನೇ ಪ್ರಕರಣದ ಮೇರೆಗೆ ಪ್ರಕಟಿತವಾದ ಹೊಸ ಘೋಷಣೆಗನುಗುಣವಾಗಿ ಆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಪ್ರತಿಬಂಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

**24. ಹೆಚ್ಚಿನ ಅಭಿವೃದ್ಧಿಗಾಗಿ ಕಾಮಗಾರಿಗಳನ್ನು ಕೈಗೊಳ್ಳಲು ಮಂಡಲಿಗಿರುವ ಅಧಿಕಾರ.–** (1) ಈ ಅಧಿನಿಯಮದಲ್ಲಿ ಏನೇ ಇದ್ದರೂ ಯಾವುದೇ ಪ್ರದೇಶದ ಬಗ್ಗೆ ಆ ಪ್ರದೇಶದ ಹೆಚ್ಚಿನ ಅಭಿವೃದ್ಧಿಗಾಗಿ ಅವಶ್ಯಕವೆಂದು ಅಥವಾ ಅಪೇಕ್ಷಣೀಯವೆಂದು ಮಂಡಲಿಯು ಪರ್ಯಾಲೋಚಿಸಬಹುದಾದಂಥ ಕಾಮಗಾರಿಗಳನ್ನು, ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಮಂಡಲಿಯು ಕೈಕೊಳ್ಳಬಹುದು.

**25. ವಸೂಲು ಮಾಡಲಾದ ಪುರೋಭಿವೃದ್ಧಿ ತೆರಿಗೆಯನ್ನು ಕೆಲವು ಸಂದರ್ಭಗಳಲ್ಲಿ ಸ್ಥಳೀಯ ಪ್ರಾಧಿಕಾರದ ನಿಧಿಗಳಿಗೆ ಜಮೆ ಮಾಡುವುದು.–** ಅಭಿವೃದ್ಧಿ ಅಥವಾ ಮೇಲ್ಪಾಟು ಯೋಜನೆಯ ಕಾರ್ಯನಿರ್ವಹಣೆಯ ಪರಿಣಾಮವಾಗಿ ಸ್ಥಳೀಯ ಪ್ರಾಧಿಕಾರದ ವಿನಂತಿಯ ಮೇರೆಗೆ ಯಾವುದೇ ಭೂಮಿಯ ಮೌಲ್ಯದಲ್ಲಿ ಹೆಚ್ಚಳವನ್ನು ಉಂಟುಮಾಡಿದಲ್ಲಿ, ಮತ್ತು ಇದಕ್ಕಾಗಿ ಸ್ಥಳೀಯ ಪ್ರಾಧಿಕಾರವು ಅವಶ್ಯಕ ನಿಧಿಗಳನ್ನು ಮಂಡಲಿಯ ವಶಕ್ಕೆ ಒಪ್ಪಿಸಿದಲ್ಲಿ ಸಂಬಂಧಪಟ್ಟ ವ್ಯಕ್ತಿಯಿಂದ ಮಂಡಲಿಯು ವಸೂಲ್ಮಾಡಿದ ಪುರೋಭಿವೃದ್ಧಿ ತೆರಿಗೆಯನ್ನು, ಅದರ ಶೇಕಡಾ ಹತ್ತರಷ್ಟು ವಸೂಲಿ ವೆಚ್ಚಗಳನ್ನು ಕಳೆದುಕೊಂಡ ಅನಂತರ, ಮಂಡಲಿಯು ಸ್ಥಳೀಯ ಪ್ರಾಧಿಕಾರಕ್ಕೆ ಜಮೆ ಮಾಡತಕ್ಕದ್ದು.

**26. ಮೂರು ವರ್ಷಗಳೊಳಗೆ ಮಂಡಲಿಯು ಯೋಜನೆಗಳನ್ನು ಕಾರ್ಯಗತಗೊಳಿಸತಕ್ಕದ್ದು.–** ಅಭಿವೃದ್ಧಿ ಯೋಜನೆಯನ್ನು ಅಥವಾ ಮೇಲ್ಪಾಟು ಯೋಜನೆಯನ್ನು, ಆ ಯೋಜನೆಯು ಮಂಜೂರಾದ ದಿನಾಂಕದಿಂದ ಮೂರು ವರ್ಷಗಳೊಳಗೆ, ಮಂಡಲಿಯು ಕಾರ್ಯಗತಗೊಳಿಸತಕ್ಕದ್ದು:

ಪರಂತು, ಕಾರ್ಯಗತಗೊಳಿಸುವ ಅವಧಿಯನ್ನು ಸರ್ಕಾರವು ಆದೇಶದ ಮೂಲಕ ವಿಸ್ತರಿಸಬಹುದು.

## ಅಧ್ಯಾಯ – IV
## ಸಾಮಾನ್ಯ ಪ್ರಕರಣಗಳು

**27. ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಬೀದಿಯ ರಚನೆಗಾಗಿ ಅಥವಾ ಬದಲಾವಣೆಗಾಗಿ, ಮಂಡಲಿಗೆ ಅಗತ್ಯವಿರುವ ಭೂಮಿಯು ತಾತ್ಕಾಲಿಕವಾಗಿ ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದು.–** ಯಾವುದೇ ಅಭಿವೃದ್ಧಿ ಅಥವಾ ಮೇಲ್ಪಾಟು ಯೋಜನೆಯ ಮೇರೆಗೆ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾದ ಮತ್ತು ಈಗಿರುವ ಯಾವುದೇ ಸಾರ್ವಜನಿಕ ಬೀದಿಯನ್ನು ಅಥವಾ ಇತರ ಭೂಮಿಯನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು, ಮಂಡಲಿಯು ರಚಿಸಬೇಕಾದ, ವ್ಯತ್ಯಾಸಗೊಳಿಸಬೇಕಾದ, ಅಗಲ ಮಾಡಬೇಕಾದ;

ತಿರುಗಿಸಬೇಕಾದ, ಎತ್ತರಿಸಬೇಕಾದ, ಪುನರ್ವವಸ್ಥೆಗೊಳಿಸಬೇಕಾದ ಅಥವಾ ಪುನರ್ ನಿರ್ಮಿಸಬೇಕಾದ ಬೀದಿಯ ಯಾವುದೇ ಭಾಗದ ನಿವೇಶನದಲ್ಲಿ ಸೇರಿಸಿರುವಾಗ (ಇದರಲ್ಲಿ ಇನ್ನು ಮುಂದೆ "ಅಗತ್ಯವಾದ ಭಾಗ" ವೆಂದು ಕರೆಯಲಾಗುವ) ಈಗಿನ ಅಂಥ ಬೀದಿಯು ಅಥವಾ ಇತರ ಭೂಮಿಯು, ಸಂದರ್ಭಾನುಸಾರ, ಪೂರ್ಣವಾಗಿ ಅಥವಾ ಭಾಗಶಃ ಮೇಲೆ ಹೇಳಿದಂತೆ ಮಾಡಬೇಕಾದ ಬೀದಿಯ ಭಾಗವಾಗಿ ತನಗೆ ಅಗತ್ಯವಾಗಿದೆಯೆಂದು ಸಂಬಂಧಪಟ್ಟ ಸ್ಥಳೀಯ, ಪ್ರಾಧಿಕಾರಕ್ಕೆ ಮಂಡಲಿಯು ನೋಟೀಸನ್ನು ಕೊಡತಕ್ಕದ್ದು ಮತ್ತು ಅಗತ್ಯವಿರುವ ಭಾಗವು ತದನಂತರ, 29ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು.

**28. ಮಂಡಲಿಯು ಸ್ಥಳೀಯ ಪ್ರಾಧಿಕಾರಗಳ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.–** (1) ಈ ಅಧಿನಿಯಮವು ಅನ್ವಯವಾಗುವ ಯಾವುದೇ ನಗರ ಪ್ರದೇಶದಲ್ಲಿ ಅಥವಾ ಅದರ ಭಾಗದಲ್ಲಿ, ಅಧಿಸೂಚನೆ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಅಂಥ ಅವಧಿಯವರೆಗೆ ಮತ್ತು ಅಂಥ ನಿರ್ಬಂಧಗಳು ಮತ್ತು ಮಾರ್ಪಾಟುಗಳು, ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಆ ಸ್ಥಳೀಯ ಪ್ರಾಧಿಕಾರದ ಅಥವಾ ಅದರ ಸ್ಥಾಯಿ ಸಮಿತಿಯ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಮಂಡಲಿಯು ಚಲಾಯಿಸತಕ್ಕದ್ದೆಂದು ಮತ್ತು ನಿರ್ವಹಿಸತಕ್ಕದ್ದೆಂದು ಸರ್ಕಾರವು ಘೋಷಿಸಬಹುದು:

ಪರಂತು, ಅಂಥ ಪ್ರದೇಶವು ಅಥವಾ ಅದರ ಭಾಗವು ಸ್ಥಳೀಯ ಪ್ರಾಧಿಕಾರದ ಪರಿಮಿತಿಗಳೊಳಗೆ ಇದ್ದರೆ, ಅಂಥ ಘೋಷಣೆಯನ್ನು ಮಾಡುವ ಮುಂಚೆ ಸ್ಥಳೀಯ ಪ್ರಾಧಿಕಾರದೊಡನೆ ಸಮಾಲೋಚಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಮಾಡಿದ ಅನಂತರ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸ್ಥಳೀಯ ಪ್ರಾಧಿಕಾರವು ಅಥವಾ ಅದರ ಯಾವುದೇ ಸ್ಥಾಯೀಸಮಿತಿಯು ಅಥವಾ ಅಧಿಕಾರಿಯು, ಅಂಥ ಘೋಷಣೆಯ ಮೂಲಕ ಮಂಡಲಿಗೆ ಪ್ರದತ್ತವಾಗಿರುವ ಅಥವಾ ವಿಧಿಸಲಾಗಿರುವ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಚಲಾಯಿಸಲು ಮತ್ತು ನಿರ್ವಹಿಸಲು ಸಕ್ಷಮವಾಗಿರತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಮೇರೆಗೆ ತಾನು ಚಲಾಯಿಸಬಹುದಾದ ಪ್ರಕಾರ್ಯಗಳ ಪೈಕಿ ಯಾವುದೇ ಪ್ರಕಾರ್ಯವನ್ನು ಮಂಡಳಿಯು, ಮಂಡಲಿಯ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ ಪ್ರತ್ಯಾಯೋಜಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಪ್ರತ್ಯಾಯೋಜಿಸಲಾದ ಯಾವುವೇ ಅಧಿಕಾರಗಳನ್ನು ಅಥವಾ ಪ್ರಕಾರ್ಯಗಳನ್ನು ಚಲಾಯಿಸುವುದು ಅಥವಾ ನಿರ್ವಹಿಸುವುದು, ಮಂಡಲಿಯು ವಿಧಿಸಬಹುದಾದಂಥ ಪರಿಮಿತಗಳಿಗೆ, ಷರತ್ತುಗಳಿಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

**29. ಬೀದಿಗಳು ಪೂರ್ಣಗೊಂಡ ಬಳಿಕ ಅವು ಮತ್ತು ಬಯಲು ಜಾಗಗಳು ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದು ಅವುಗಳನ್ನು ಸುಸ್ಥಿತಿಯಲ್ಲಿಡತಕ್ಕದ್ದು.–** (1) ಸ್ಥಳೀಯ ಪ್ರಾಧಿಕಾರದೊಡನೆ ಸಮಾಲೋಚಿಸಿದ ಅನಂತರ, ಮತ್ತು ಮಂಡಲಿಯಿಂದ ರಚಿತವಾದ ಯಾವುದೇ ಬೀದಿಯನ್ನು, ಸರ್ಕಾರವು

ಮಂಜೂರು ಮಾಡಿದ ಯಾವುದೇ ಯೋಜನೆಯ ನಕ್ಷೆಗಳಲ್ಲಿ ತೋರಿಸಲಾದ ರೀತಿಯಲ್ಲಿ ಕ್ರಮಬದ್ಧವಾಗಿ ಮಟ್ಟಮಾಡಲಾಗಿದೆಯೆಂದು ಅದಕ್ಕೆ ನೆಲಗಟ್ಟು ಮಾಡಲಾಗಿದೆಯೆಂದು, ಜಲ್ಲಿ ಹಾಕಲಾಗಿದೆಯೆಂದು, ಚಪ್ಪಡಿಯನ್ನು ಹಾಸಲಾಗಿದೆಯೆಂದು, ಫಟಾರವನ್ನು ಮತ್ತು ಚರಂಡಿಯನ್ನು ಹಾಗೂ ಗ್ರಾಮಸಾರ ಚರಂಡಿಯನ್ನು ಮಾಡಲಾಗಿದೆಯೆಂದು ಮತ್ತು ತನ್ನ ಅಭಿಪ್ರಾಯದಂತೆ ಬೀದಿಯನ್ನು ಬೆಳಗಿಸುವುದಕ್ಕಾಗಿ ಅವಶ್ಯವಿರುವ ಹಾಗೂ ಮಂಡಲಿಯು ಒದಗಿಸಬೇಕಾಗಿರುವಂಥ ದೀಪಗಳನ್ನು, ದೀಪದ ಕಂಬಗಳನ್ನು ಮತ್ತು ಇತರ ಉಪಕರಣಗಳನ್ನು ಹಾಗೆ ಒದಗಿಸಲಾಗಿದೆಯೆಂದು ಮನದಟ್ಟಾದ ಅನಂತರ ಅಂಥ ಬೀದಿಯನ್ನು ಸಾರ್ವಜನಿಕ ಬೀದಿಯೆಂದು ಸರ್ಕಾರವು ಘೋಷಿತಕ್ಕದ್ದು, ಮತ್ತು ಆತರುವಾಯ, ಅಂಥ ಬೀದಿಯು ಸ್ಥಳೀಯ ಪ್ರಾಧಿಕಾರದಲ್ಲಿ ಸಂದರ್ಭಾನುಸಾರ ನಿಹಿತವಾಗತಕ್ಕದ್ದು ಅಥವಾ ಪುನರ್‌ನಿಹಿತವಾಗತಕ್ಕದ್ದು ಮತ್ತು ತದನಂತರ ಅಂಥ ಬೀದಿಯನ್ನು ಸ್ಥಳೀಯ ಪ್ರಾಧಿಕಾರವು ಸುಸ್ಥಿತಿಯಲ್ಲಿಡತಕ್ಕದ್ದು, ದುರಸ್ತಿಮಾಡತಕ್ಕದ್ದು, ಅದಕ್ಕೆ ದೀಪದ ವ್ಯವಸ್ಥೆ ಮಾಡತಕ್ಕದ್ದು ಹಾಗೂ ಅದನ್ನು ಸ್ವಚ್ಛವಾಗಿಡತಕ್ಕದ್ದು. ಸರ್ಕಾರವು ತನ್ನನ್ನು ಸಮಾಲೋಚಿಸಿದಾಗ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ಅರವತ್ತು ದಿನಗಳೊಳಗೆ ಉತ್ತರವನ್ನು ಕೊಡದಿದ್ದರೆ, ತನ್ನ ಸಹಮತಿಯನ್ನು ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

(2) ವಾಯು ಸಂಚಾರಕ್ಕಾಗಿ ಮೀಸಲಾಗಿಟ್ಟಿರುವ ಯಾವುದೇ ಬಯಲು ಜಾಗವು ಮತ್ತು ಸರ್ಕಾರದಿಂದ ಮಂಜೂರಾದ ಯಾವುದೇ ಅಭಿವೃದ್ಧಿ ಯೋಜನೆಯ ಮತ್ತು ಮೇಲ್ಪಾಟು ಯೋಜನೆಯ ಭಾಗವಾಗಿ ಮಂಡಲಿಯು ಒದಗಿಸಿದ ಮತ್ತು ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದ ಯಾವುದೇ ಭಾಗದಲ್ಲಿ ಮೋಟಾರು ನಿಲ್ದಾಣಗಳಿಗಾಗಿ, ಆಟದ ಮೈದಾನಗಳಿಗಾಗಿ, ಸಾರ್ವಜನಿಕ ಮೂತ್ರಿಗಳಿಗಾಗಿ ಮತ್ತು ಕಕ್ಕಸುಗಳಿಗಾಗಿ, ಸ್ಮಶಾನ ಮತ್ತು ಸುಡುಗಾಡುಗಳಿಗಾಗಿ ಮೀಸಲಾಗಿರಿಸಿದ ಪ್ರದೇಶಗಳನ್ನು ಅವು ಪೂರ್ಣಗೊಂಡ ಬಳಿಕ ಸ್ಥಳೀಯ ಪ್ರಾಧಿಕಾರಕ್ಕೆ ವರ್ಗಾಯಿಸತಕ್ಕದ್ದು ಮತ್ತು ತದನಂತರ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

(3) ಈ ಪ್ರಕರಣದ ಉಪಬಂಧಗಳನ್ನು ಅರ್ಥೈಸುವ ಮತ್ತು ಕಾರ್ಯರೂಪಕ್ಕೆ ತರುವ ಬಗ್ಗೆ ಮಂಡಲಿಯ ಮತ್ತು ಸ್ಥಳೀಯ ಪ್ರಾಧಿಕಾರದ ನಡುವೆ ಉದ್ಭವಿಸುವ ಯಾವುದೇ ವಿವಾದವನ್ನು, ಸರ್ಕಾರವು ತೀರ್ಮಾನಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

**30. ಕೆಲವು ಸಂದರ್ಭಗಳಲ್ಲಿ ಮಂಡಲಿಯು ನಿವೇಶನಗಳನ್ನು ಮಾರತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ.–** 29ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಮೇಲ್ಪಾಟುಗಳನ್ನು ಬಹುಮಟ್ಟಿಗೆ ಮಾಡುವವರೆಗೆ, ವ್ಯಕ್ತಿಗಳ ವಸತಿ ಸೌಕರ್ಯಕ್ಕೋಸ್ಕರ ಕಟ್ಟಡಗಳನ್ನು ಕಟ್ಟುವ ಉದ್ದೇಶಕ್ಕಾಗಿ ಮಂಡಲಿಯ ಯಾವವೇ ನಿವೇಶನಗಳನ್ನು ಮಾರತಕ್ಕದ್ದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದ್ದಲ್ಲ.

**31. ಹೊಸ ಬಡಾವಣೆಗಳ ಅಥವಾ ಲೇಔಟುಗಳ ನಿರ್ಮಾಣ ಅಥವಾ ಹೊಸ ಖಾಸಗಿ ಬೀದಿಗಳ ರಚನೆ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಮಂಡಲಿಯ ವ್ಯಕ್ತ ಮಂಜೂರಾತಿಯನ್ನು ಲಿಖಿತರೂಪದಲ್ಲಿ ಪಡೆಯದ ಹೊರತು ಮತ್ತು ಮಂಡಲಿಯು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗನುಸಾರವಾಗಿ ಹೊರತು ಕಟ್ಟಡಗಳನ್ನು ಕಟ್ಟುವ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯು ಯಾವುದೇ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸತಕ್ಕದ್ದಲ್ಲ ಅಥವಾ ನಿರ್ಮಿಸಲು ಪ್ರಯತ್ನಿಸತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಬಡಾವಣೆಯು ಅಥವಾ ಲೇಔಟು ಸ್ಥಳೀಯ ಪ್ರಾಧಿಕಾರದ ಪರಿಮಿತಿಗಳೊಳಗೆ ಇರುವಲ್ಲಿ, ಅಂಥ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಾಣ ಮಾಡುವುದಕ್ಕೆ ಸ್ಥಳೀಯ ಪ್ರಾಧಿಕಾರದ ಸಹಮತಿಯಿಲ್ಲದೆ ಮಂಡಲಿಯು ಮಂಜೂರಾತಿಯನ್ನು ಕೊಡತಕ್ಕದ್ದಲ್ಲ. ಸ್ಥಳೀಯ ಪ್ರಾಧಿಕಾರದೊಡನೆ ಸಮಾಲೋಚಿಸಿದ ಅನಂತರ ಅರವತ್ತು ದಿನಗಳೊಳಗೆ ತನ್ನ ಅಭಿಪ್ರಾಯವನ್ನು ತಿಳಿಸಲು ಅದು ವಿಫಲರಾದರೆ ಸ್ಥಳೀಯ ಪ್ರಾಧಿಕಾರವು ತನ್ನ ಸಹಮತಿಯನ್ನು ಕೊಟ್ಟಿದೆಯೆಂದು ಭಾವಿಸತಕ್ಕದ್ದು:

ಮತ್ತು ಪರಂತು, ಬಡಾವಣೆಯ ಅಥವಾ ಲೇಔಟಿನ ನಿರ್ಮಾಣದ ಬಗ್ಗೆ ಅಥವಾ ಅದಕ್ಕೆ ಸಂಬಂಧಿಸಿದ ಷರತ್ತುಗಳ ಬಗ್ಗೆ ಸ್ಥಳೀಯ ಪ್ರಾಧಿಕಾರದ ಮತ್ತು ಮಂಡಲಿಯ ನಡುವೆ ಒಮ್ಮತವಿರದಿದ್ದರೆ, ಆ ವಿಷಯವನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಅದರ ಬಗ್ಗೆ ಸರ್ಕಾರದ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(2) ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸಲು ಅಥವಾ ಹೊಸ ಖಾಸಗಿ ಬೀದಿಯನ್ನು ರಚಿಸಲು ಉದ್ದೇಶಿಸಿರುವ ಯಾರೇ ವ್ಯಕ್ತಿಯು, ಮಂಡಲಿಯು ರಚಿಸಿದ ಉಪವಿಧಿಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ತೋರಿಸುವ ನಕ್ಷೆಗಳ ಮತ್ತು ಅಂದಾಜುಗಳ ಜತೆಗೆ ಲಿಖಿತ ಅರ್ಜಿಯನ್ನು ಅಧ್ಯಕ್ಷರಿಗೆ ಕಳುಹಿಸತಕ್ಕದ್ದು.

(3) ಬೀದಿಗಳ ಮಟ್ಟ ಮತ್ತು ಅಗಲ ಮತ್ತು ಅವುಗಳಿಗೆ ಲಗತ್ತಾಗಿರುವ ಕಟ್ಟಡಗಳ ಎತ್ತರ ಇವುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಲಾದ ಯಾವುವೇ ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳು, ಆ ಉಪಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಬೀದಿಗಳ ಸಂದರ್ಭದಲ್ಲಿ ಸಹ ಅನ್ವಯಿಸತಕ್ಕದ್ದು ಮತ್ತು ಮಂಡಲಿಯ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅರ್ಜಿಯು ಬಂದ ಅನಂತರ, ಆರು ತಿಂಗಳೊಳಗೆ, ತಾನು ಸೂಕ್ತವೆಂದು ಅಲೋಚಿಸಬಹುದಾದಂಥ ಷರತ್ತುಗಳ ಮೇರೆಗೆ ಬಡಾವಣೆಯನ್ನು ಅಥವಾ ಲೇಔಟನ್ನು ನಿರ್ಮಿಸಲು ಅಥವಾ ಬೀದಿಗಳನ್ನು ರಚಿಸಲು ಮಂಡಲಿಯು ಮಂಜೂರಾತಿಯನ್ನು ನೀಡತಕ್ಕದ್ದು ಅಥವಾ ಅದನ್ನು ಪುರಸ್ಕರಿಸತಕ್ಕದ್ದಲ್ಲ ಅಥವಾ ಆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೇಳತಕ್ಕದ್ದು.

(5) ಅರ್ಜಿಯನ್ನು ಮಂಜೂರು ಮಾಡುವ ಮುಂಚೆ ರಸ್ತೆಗಳನ್ನು, ಪಕ್ಕದ ಚರಂಡಿಗಳನ್ನು, ಅಡಿಗಾಲುವೆಗಳನ್ನು, ಭೂಗತ ಚರಂಡಿಗಳನ್ನು ಮತ್ತು ನೀರು ಸರಬರಾಜನ್ನು ಮತ್ತು ಬೆಳಕಿನ ವ್ಯವಸ್ಥೆಯನ್ನು ಮಾಡಲು ತಗಲುವ ವೆಚ್ಚವನ್ನು ಭರಿಸಲು ಅವಶ್ಯವಿರುವ ಮೊಬಲಗನ್ನು ಮತ್ತು ಇತರ ಉದ್ದೇಶಗಳಿಗಾಗಿ ಅರ್ಜಿದಾರನು ಇಡಬೇಕೆಂದು ಮಂಡಲಿಯು ಕೇಳಬಹುದಾದ ವೆಚ್ಚಗಳನ್ನು ಭರಿಸುವ ಬಗ್ಗೆ ಅವಶ್ಯವಾದ ಮೊಬಲಗನ್ನು ಠೇವಣಿ ಇಡುವಂತೆ ಅರ್ಜಿದಾರನನ್ನು ಮಂಡಲಿಯು ಅಗತ್ಯಪಡಿಸಬಹುದು: ಪರಂತು, ಅರ್ಜಿದಾರನು ತಾನು ನಿರ್ಮಿಸಿದ ರಸ್ತೆಗಳ, ಚರಂಡಿಗಳ, ನೀರು ಸರಬರಾಜಿನ ದೊಡ್ಡ ಕೊಳವೆಗಳು ಮತ್ತು ಖುಲ್ಲಾ ಜಾಗಗಳ ಒಡೆತನವನ್ನು, ಆ ಬಗ್ಗೆ ಯಾವುದೇ ನಷ್ಟ ಪರಿಹಾರವನ್ನು ಕೇಳದೆ ಖಾಯಂ ಆಗಿ ಮಂಡಲಿಗೆ ವರ್ಗಾಯಿಸುವುದಕ್ಕೆ ಒಪ್ಪಿಗೆಯನ್ನು ಕೊಡತಕ್ಕದ್ದು.

**(6) ಕೆಳಕಂಡ ಸಂದರ್ಭಗಳಲ್ಲಿ ಅಂಥ ಮಂಜೂರಾತಿಯನ್ನು ಇನಕಾರ ಮಾಡಬಹುದು–**

(i) ಬೀದಿಯ ಮೇಲ್ಪಾಟಿನ ಬಗೆಗಿನ ಯಾವುದೇ ಸಾಮಾನ್ಯ ಯೋಜನೆಯನ್ನು ಅಥವಾ ಮೇಲ್ಪಾಟಿನ ಅಥವಾ ಅಭಿವೃದ್ಧಿಯ ಇತರ ಯೋಜನೆಗಳನ್ನು ಮಂಡಲಿಯು ಕಾರ್ಯಗತಗೊಳಿಸುವ ಬಗ್ಗೆ ಉದ್ದೇಶಿತವಾದ ಬೀದಿಯು ಮಾಡಲಾಗಿರುವ ಅಥವಾ ಮಾಡುವ ಸಂಭವವಿದೆಯೆಂದು ಮಂಡಲಿಯು ಅಭಿಪ್ರಾಯಪಡುವ ಯಾವುದೇ ಏರ್ಪಾಡುಗಳಿಗೆ ಅಡ್ಡಿಯುಂಟು ಮಾಡುವುದಾದರೆ;

(ii) ಉದ್ದೇಶಿತವಾದ ಬೀದಿಯು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳಿಗೆ ಮತ್ತು ಉಪನಿಧಿಗಳಿಗೆ ಅನುಗುಣವಾಗಿ ಇರದಿದ್ದರೆ;

(iii) ಉದ್ದೇಶಿತವಾದ ಬೀದಿಯು, ಈಗಾಗಲೇ ಬಳಕೆಯಲ್ಲಿರುವ ಬೀದಿಯ ಒಂದು ತುದಿಗೆ ಸೇರುವಂತೆ ರೂಪಿತವಾಗಿರದಿದ್ದರೆ; ಅಥವಾ

(iv) ಲೇಔಟ್ ಮಂಡಲಿಯ ಈಗಿರುವ ಅಥವಾ ಉದ್ದೇಶಿತವಾದ ಅಭಿವೃದ್ಧಿಯ ಅಥವಾ ಮೇಲ್ಪಾಟಿನ ಯೋಜನೆಗಳಿಗೆ ಹೊಂದಿಕೆಯಾಗುವುದೆಂದು ಮಂಡಲಿಯು ಅಭಿಪ್ರಾಯಪಟ್ಟಿದ್ದರೆ.

(7) ಮಂಡಲಿಯ ಮಂಜೂರಾತಿಯಿಲ್ಲದೆ ಅಥವಾ ಅದು ವಿಧಿಸಿದ ಷರತ್ತುಗಳಿಗೆ ಅನುಸಾರವಾಗಿಯಲ್ಲದೆ ಬೇರೆ ರೀತಿಯಲ್ಲಿ ಯಾವ ವ್ಯಕ್ತಿಯೂ ಲೇಔಟನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಯಾವುದೇ ಹೊಸ ಖಾಸಗಿ ಬೀದಿಯನ್ನು ರಚಿಸತಕ್ಕದ್ದಲ್ಲ. ಅರ್ಜಿದಾರನು ಹೆಚ್ಚಿನ ಮಾಹಿತಿಯನ್ನು ಒದಗಿಸಬೇಕೆಂದು ಮಂಡಲಿಯು ಅಗತ್ಯಪಡಿಸಿದರೆ, ಅಂಥ ಮಾಹಿತಿಯು ಅನಂತರ, ಮಂಡಲಿಯು ಆದೇಶವನ್ನು ಮಾಡುವವರೆಗೆ ಆ ಲೇಔಟನ್ನು ನಿರ್ಮಿಸಲು ಅಥವಾ ಬೀದಿಯನ್ನು ರಚಿಸಲು ಅವನು ಯಾವ ಕ್ರಮವನ್ನೂ ಕೈಕೊಳ್ಳತಕ್ಕದ್ದಲ್ಲ:

ಪರಂತು ಸದರಿ ಅರ್ಜಿಯನ್ನು ಅಂತಿಮವಾಗಿ ತಾನು ಅವಶ್ಯವೆಂದು ಪರ್ಯಾಲೋಚಿಸುವ ಎಲ್ಲ ಮಾಹಿತಿಯನ್ನು ಪಡೆದ ಅನಂತರ, ಮಂಡಲಿಯು ಅಂಥ ಆದೇಶಗಳನ್ನು ಮಾಡುವುದನ್ನು ಯಾವ ಸಂಧರ್ಭದಲ್ಲೂ ಆರು ತಿಂಗಳುಗಳಿಗಿಂತ ಹೆಚ್ಚಿಗೆ ವಿಳಂಬ ಮಾಡತಕ್ಕದ್ದಲ್ಲ.

(8) (2)ನೇ ಉಪಪ್ರಕರಣದ ಮೇರೆಗಿನ ಅರ್ಜಿಯು ತಲುಪಿದ ದಿನಾಂಕದಿಂದ ಆರು ತಿಂಗಳುಗಳೊಳಗೆ ಅಥವಾ (7)ನೇ ಉಪಪ್ರಕರಣದ ಮೇರೆಗೆ ಮಾಹಿತಿಯನ್ನು ಕೇಳಿರುವಾಗ ಅಂಥ ಮಾಹಿತಿಯನ್ನು ಒದಗಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗೆ, ಮಂಡಲಿಯು ಮಂಜೂರಾತಿಯನ್ನು ಇನಕಾರ ಮಾಡದಿದ್ದರೆ, ಅಂಥ ಮಂಜೂರಾತಿಯನ್ನು ಕೊಟ್ಟಿರುವುದಾಗಿ ಭಾವಿಸತಕ್ಕದ್ದು ಮತ್ತು ಅರ್ಜಿದಾರನು ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಲು ಅಥವಾ ಬೀದಿಯನ್ನು ರಚಿಸಲು ಉದ್ಯುಕ್ತನಾಗಬಹುದು. ಆದರೆ ಅದು ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಅಥವಾ ಉಪವಿಧಿಗಳನ್ನು ಉಲ್ಲಂಘಿಸುವಂತಿರತಕ್ಕದ್ದಲ್ಲ.

(9) ಈ ಪ್ರಕರಣದ ಮೇರೆಗೆ ಯಾವ ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸುವುದಕ್ಕಾಗಿ ಮಂಜೂರಾತಿಯನ್ನು ಕೊಡಲಾಗಿದೆಯೋ ಅಥವಾ ಕೊಟ್ಟಿರುವುದಾಗಿ ಭಾವಿಸಲಾಗಿದೆಯೋ ಆ ಪ್ರತಿಯೊಂದು ಬಡಾವಣೆಯು ಅಥವಾ ಲೇಔಟು, ಯೋಜನಾ ಪ್ರಾಧಿಕಾರದ ಅಭಿವೃದ್ಧಿ ಯೋಜನೆಯ ರೂಪರೇಖೆಗೆ ಅಥವಾ ಸಮಗ್ರ ಅಭಿವೃದ್ಧಿ ಯೋಜನೆಗೆ ಅನುಗುಣವಾಗಿ ಇರತಕ್ಕದ್ದು.

(10) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾರೇ ವ್ಯಕ್ತಿಯು ಯಾವುದೇ ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಿದರೆ ಅಥವಾ ರೂಪಿಸಲು ಪ್ರಯತ್ನಿಸಿದರೆ ಅಥವಾ (7)ನೇ ಉಪಪ್ರಕರಣದ ಮೇರೆಗೆ ಮಂಡಲಿಯ ಆದೇಶವಿಲ್ಲದೆ ಅಥವಾ ಆ ಆದೇಶಕ್ಕನುಗುಣವಾಗಿಯಲ್ಲದೆ ಬೇರೆ ರೀತಿಯಲ್ಲಿ ಯಾವುದೇ ಬೀದಿಯನ್ನು ರಚಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಗೆ ಗುರಿಯಾತಕ್ಕದ್ದು.

**32. ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ವ್ಯತ್ಯಾಸಗೊಳಿಸುವುದು ಅಥವಾ ನಾಶಪಡಿಸುವುದು.–** (1) ಯಾರೇ ವ್ಯಕ್ತಿಯು, 31ನೇ ಪ್ರಕರಣದಲ್ಲಿ ಉಲ್ಲಿಖಿತವಾದ ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸಿದರೆ ಅಥವಾ ಬೀದಿಯನ್ನು ರೂಪಿಸಿದರೆ ಅಥವಾ ಸದರಿ ಪ್ರಕರಣದ ಮೇರೆಗೆ ಮಂಡಲಿಯ ಆದೇಶಗಳಲ್ಲದೆ ಅಥವಾ ಅವುಗಳಿಗೆ ಅನುಗುಣವಾಗಿಯಲ್ಲದೆ ಯಾವುದೇ ಕಟ್ಟಡವನ್ನು ರಚಿಸಿದರೆ, ಅಂಥ ವ್ಯಕ್ತಿಯ ಮೇಲೆ ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಷನ್ ಹೂಡಲಿ ಅಥವಾ ಹೂಡದಿರಲಿ, ಮಂಡಲಿಯು ನೋಟೀಸಿನ ಮೂಲಕ,–

(ಎ) ಅಂಥ ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ಮಂಡಲಿಗೆ ಸಮಾಧಾನವಾಗುವ ಹಾಗೆ ಏಕೆ ವ್ಯತ್ಯಾಸಗೊಳಿಸತಕ್ಕದ್ದಲ್ಲವೆಂದು ಅಥವಾ ಹಾಗೆ ವ್ಯತ್ಯಾಸಗೊಳಿಸುವುದು ಕಾರ್ಯಸಾಧ್ಯವಲ್ಲವೆಂದು ಮಂಡಲಿಯು ಭಾವಿಸಿದರೆ, ಅಂಥ ಬಡಾವಣೆಯನ್ನು ಲೇಔಟನ್ನು ಅಥವಾ ಬೀದಿಯನ್ನು ಏಕೆ ನಾಶಮಾಡತಕ್ಕದ್ದಲ್ಲವೆಂಬ ಬಗ್ಗೆ ತಾನು ಸಹಿ ಮಾಡಿದ ಲಿಖಿತ ಹೇಳಿಕೆಯ ಮೂಲಕ ಕಾರಣಗಳನ್ನು ತೋರಿಸಬೇಕೆಂದು ಮತ್ತು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚಿತವಾಗಿ ಮಂಡಲಿಗೆ ಅದನ್ನು ಕಳಿಸಬೇಕೆಂದು ಅವನನ್ನು ಅಗತ್ಯಪಡಿಸಬಹುದು; ಅಥವಾ

(ಬಿ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಮತ್ತು ಅಂಥ ಕಾಲದಲ್ಲಿ ಮತ್ತು ಅಂಥ ಸ್ಥಳದಲ್ಲಿ ಅವನು ಖುದ್ದಾಗಿಯಾಗಲಿ ಅಥವಾ ಕ್ರಮಬದ್ಧವಾಗಿ ಅಧಿಕೃತನಾದ ಏಜೆಂಟನ ಮೂಲಕವಾಗಿಯಾಗಲಿ ಮಂಡಲಿಯ ಮುಂದೆ ಹಾಜರಾಗುವಂತೆ ಮತ್ತು ಮೇಲೆ ಹೇಳಿದಂತೆ ಕಾರಣವನ್ನು ತೋರಿಸುವಂತೆ ಅವನನ್ನು ಅಗತ್ಯಪಡಿಸಬಹುದು.

(2) ಯಾವ ವ್ಯಕ್ತಿಗೆ ಅಂಥ ನೋಟೀಸನ್ನು ಜಾರಿ ಮಾಡಲಾಗಿದೆಯೋ ಅವನು, ಅಂಥ ಬಡಾವಣೆಯನ್ನು, ಲೇಔಟನ್ನು ಅಥವಾ ಬೀದಿಯನ್ನು ಏಕೆ ಹಾಗೆ ವ್ಯತ್ಯಾಸಗೊಳಿಸತಕ್ಕದ್ದಲ್ಲ ಅಥವಾ ನಾಶಗೊಳಿಸತಕ್ಕದ್ದಲ್ಲ ಎಂಬ ಬಗ್ಗೆ ಮಂಡಲಿಗೆ ಮನದಟ್ಟಾಗುವಂತೆ ಸಾಕಷ್ಟು ಕಾರಣವನ್ನು ತೋರಿಸಲು ತಪ್ಪಿದರೆ, ಅಂಥ ಬಡಾವಣೆಯನ್ನು, ಲೇಔಟನ್ನು, ಅಥವಾ ಬೀದಿಯನ್ನು ವ್ಯತ್ಯಾಸಗೊಳಿಸಬೇಕೆಂದು ಅಥವಾ ನಾಶಗೊಳಿಸಬೇಕೆಂದು, ಬರಹದಲ್ಲಿ ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಮಂಡಲಿಯು ನಿರ್ದೇಶಿಸಬಹುದು.

(3) (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ನಿರ್ದೇಶನವನ್ನು ಪಾಲಿಸಲು ಯಾರೇ ವ್ಯಕ್ತಿಯು ತಪ್ಪಿದರೆ, ಮಂಡಲಿಯು ಆ ನಿರ್ದೇಶನವನ್ನು ಕಾರ್ಯಗತಗೊಳಿಸಬಹುದು ಮತ್ತು ಆ ಬಗ್ಗೆ ತಗುಲಿದ ಖರ್ಚನ್ನು ಅಂಥ ವ್ಯಕ್ತಿಯಿಂದ, ಅದು ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲು ಮಾಡಬಹುದು.

**33. ಕಾಮಗಾರಿಯನ್ನು ಮಾಡಬೇಕೆಂದು ಆದೇಶವನ್ನು ಮಾಡಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾನೇ ಮಾಡಲು ಮಂಡಲಿಗಿರುವ ಅಧಿಕಾರ.–** (1) ಮಂಡಲಿಯು,–

(ಎ) ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸುವುದಕ್ಕೆ ಅಥವಾ ಬೀದಿಯನ್ನು ರಚಿಸುವುದಕ್ಕೆ ಸಂಬಂಧಪಟ್ಟ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅನುಮತಿಯನ್ನು ಪಡೆದ ಯಾರೇ ವ್ಯಕ್ತಿಯು, ಅದನ್ನು ಹಾಗೆ ಕಾರ್ಯಗತಗೊಳಿಸದಿದ್ದರೆ; ಅಥವಾ

(ಬಿ) ಯಾವುದೇ ಖಾಸಗಿ ಬೀದಿಯನ್ನು ಅಥವಾ ಅದರ ಭಾಗವನ್ನು ಮಂಡಲಿಗೆ ಸಮಾಧಾನವಾಗುವಂತೆ ಮಟ್ಟ ಮಾಡದಿದ್ದರೆ, ಅದಕ್ಕೆ ನೆಲಗಟ್ಟು ಮಾಡದಿದ್ದರೆ, ಜಲ್ಲಿ ಹಾಕದಿದ್ದರೆ, ಚಪ್ಪಡಿ ಹಾಸದಿದ್ದರೆ, ಘಟಾರ ಮಾಡದಿದ್ದರೆ, ಒಳಚರಂಡಿಯನ್ನು ಮಾಡದಿದ್ದರೆ, ರಕ್ಷಿಸದಿದ್ದರೆ ಅಥವಾ ಬೆಳಕಿನ ವ್ಯವಸ್ಥೆ ಮಾಡದಿದ್ದರೆ,

– ಬಡಾವಣೆಯನ್ನು ಅಥವಾ ಲೇಔಟನ್ನು ರೂಪಿಸುವ ವ್ಯಕ್ತಿಗೆ ಅಥವಾ ಅಂಥ ಬೀದಿಯ ಅಥವಾ ಅದರ ಭಾಗದ ಒಡೆಯರಿಗೆ ಮತ್ತು ಅಂಥ ಬೀದಿಗೆ ಅಥವಾ, ಅದರ ಭಾಗಕ್ಕೆ ಲಗತ್ತಾಗಿರುವ ಕಟ್ಟಡಗಳ ಅಥವಾ ಭೂಮಿಗಳ ಒಡೆಯರಿಗೆ, ಭೂಮಿಯ ಮತ್ತು ಅದರ ಮೇಲಿನ ಕಟ್ಟಡದ ಒಡೆಯರು ಬೇರೆ ಬೇರೆಯಾಗಿರುವ ಸಂದರ್ಭಗಳಲ್ಲಿ, ಭೂಮಿಯ ಮತ್ತು ಕಟ್ಟಡದ ಒಡೆಯರಿಬ್ಬರಿಗೂ ನೋಟೀಸು ಕೊಡುವ ಮೂಲಕ ತಾನು ಅವಶ್ಯವೆಂದು ಅಭಿಪ್ರಾಯಪಡುವ ಯಾವುದೇ ಕಾಮಗಾರಿಯನ್ನು, ಅಂಥ ನೋಟೀಸಿನಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ಕಾಲದೊಳಗೆ ಮಾಡಬೇಕೆಂದು ಅಗತ್ಯಪಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಅಂಥ ಯಾವುದೇ ಕಾಮಗಾರಿಯನ್ನು ಮಾಡದಿದ್ದರೆ, ಮಂಡಲಿಯು ತಾನು ಸೂಕ್ತವೆಂದು ಅಲೋಚಿಸಿದರೆ, ಅದನ್ನು ತಾನು ನಿರ್ವಹಿಸಬಹುದು ಮತ್ತು ತಗುಲಿದ ವೆಚ್ಚಗಳನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳು ಅಥವಾ ಒಡೆಯರು ಮಂಡಲಿಯು ನಿರ್ಧರಿಸಬಹುದಾದಂಥ ಪ್ರಮಾಣದಲ್ಲಿ ಸಂದಾಯಮಾಡತಕ್ಕದ್ದು, ಅಂಥ ವೆಚ್ಚಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಂದ, ಅವು ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ, ವಸೂಲು ಮಾಡಬಹುದು.

## ಅಧ್ಯಾಯ – V
## ಭೂ ಸ್ವಾಧೀನ

**34. ಒಪ್ಪಂದದ ಮೂಲಕ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮಂಡಲಿಗೆ ಇರುವ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು, ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಭೂಮಿಯನ್ನು ಅದು ನಗರ ಪ್ರದೇಶದ ಒಳಗಿರಲಿ ಅಥವಾ ಹೊರಗಿರಲಿ ಅಥವಾ ಅದರಲ್ಲಿರುವ ಯಾವುದೇ ಹಿತಾಸಕ್ತಿಯನ್ನು ಖರೀದಿ ಮಾಡುವ ಬಗ್ಗೆ ಅಥವಾ ಗೇಣಿಗೆ ಪಡೆಯುವ ಬಗ್ಗೆ ಅಂಥ ಭೂಮಿಯ ಅಥವಾ ಅದರಲ್ಲಿರುವ ಯಾವುದೇ ಹಿತಾಸಕ್ತಿಯ ಒಡೆಯನೊಡನೆ ಮಂಡಲಿಯು ಒಪ್ಪಂದ ಮಾಡಿಕೊಳ್ಳಬಹುದು.

**35. ಒಪ್ಪಂದದ ಮೂಲಕವಲ್ಲದ ಇತರ ರೀತಿಯಲ್ಲಿ ಮಾಡಿಕೊಳ್ಳುವ ಭೂ ಸ್ವಾಧೀನಕ್ಕೆ ಅನ್ವಯವಾಗುವ ಉಪಬಂಧಗಳು.–** (1) ನಗರ ಪ್ರದೇಶದ ಒಳಗಿನ ಅಥವಾ ಹೊರಗಿನ ಭೂಮಿಯನ್ನು ಒಪ್ಪಂದದ ಮೂಲಕವಲ್ಲದೆ ಇತರ ರೀತಿಯಲ್ಲಿ ಈ ಅಧಿನಿಯಮದ ಮೇರೆಗೆ ಸ್ವಾಧೀನಪಡಿಸಿಕೊಳ್ಳುವುದು ಭೂಸ್ವಾಧೀನ ಅಧಿನಿಯಮ, 1894ರ ಉಪಬಂಧಗಳಿಂದ, ಅವು ಅನ್ವಯವಾಗುವಷ್ಟರಮಟ್ಟಿಗೆ, ನಿಯಂತ್ರಿತವಾಗತಕ್ಕದ್ದು.

(2) ಭೂಸ್ವಾಧೀನ ಅಧಿನಿಯಮ 1894ರ 50ನೇ ಪ್ರಕರಣದ (2)ನೇ ಉಪಪ್ರಕರಣದ ಉದ್ದೇಶಕ್ಕಾಗಿ ಮಂಡಲಿಯನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವೆಂದು ಭಾವಿಸತಕ್ಕದ್ದು.

(3) ಭೂಸ್ವಾಧೀನ ಅಧಿನಿಯಮ, 1894ರ 16ನೇ ಪ್ರಕರಣದ ಮೇರೆಗೆ, ಭೂಮಿಯ, ಸರ್ಕಾರದಲ್ಲಿ ನಿಹಿತವಾದ ಅನಂತರ, ಸ್ವಾಧೀನ ಪಡಿಸಿಕೊಂಡ ಖರ್ಚನ್ನು ಸಂದಾಯ ಮಾಡಿದ ಮೇಲೆ ಮತ್ತು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ತಗಲಬಹುದಾದ ಯಾವುವೇ ಹೆಚ್ಚಿನ ಖರ್ಚುಗಳನ್ನು ಸಂದಾಯ ಮಾಡಲು ಮಂಡಲಿಯು ಒಪ್ಪಿಕೊಂಡ ಮೇಲೆ, ಡೆಪ್ಯುಟಿ ಕಮೀಷನರನು ಭೂಮಿಯನ್ನು ಮಂಡಲಿಗೆ ವರ್ಗಾಯಿಸತಕ್ಕದ್ದು ಮತ್ತು ತದನಂತರ ಭೂಮಿಯು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು.

## ಅಧ್ಯಾಯ – VI
## ಸ್ವತ್ತು ಮತ್ತು ಹಣಕಾಸು

**36. ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಭೂಮಿಯನ್ನು ಮಂಡಲಿಗೆ ವರ್ಗಾಯಿಸಲು ಸರ್ಕಾರಕ್ಕಿರುವ ಅಧಿಕಾರ.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ ಮತ್ತು ತಾನು ವಿಧಿಸಬಹುದಾದಂಥ ಪರಿಮಿತಿಗಳಿಗೆ ಹಾಗೂ ಷರತ್ತುಗಳಿಗೆ ಒಳಪಟ್ಟು ಮತ್ತು ಇದರಲ್ಲಿ ಇನ್ನು ಮುಂದೆ ಬರುವ ಉಪಬಂಧಗಳಿಗೆ ಒಳಪಟ್ಟು ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಸರ್ಕಾರವು ಅಧಿಸೂಚನೆಯ ಮೂಲಕ, ಮಂಡಲಿಗೆ ವರ್ಗಾಯಿಸಬಹುದು ಮತ್ತು ಅದರಲ್ಲಿ ನಿಹಿತಗೊಳಿಸಬಹುದು.

(2) ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಯಾವ ಭೂಮಿಯನ್ನೂ, ಅಂಥ ಸ್ಥಳೀಯ ಪ್ರಾಧಿಕಾರದೊಡನೆ ಸಮಾಲೋಚಿಸಿದ ಹೊರತು, (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯಲ್ಲಿ ನಿಹಿತಗೊಳಿಸತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯಲ್ಲಿ ನಿಹಿತಗೊಂಡ ಯಾವುದೇ ಭೂಮಿಯು, ಈ ಅಧಿನಿಯಮದ ಉದ್ದೇಶಕ್ಕಾಗಿ ಮಂಡಲಿಗೆ ಅಗತ್ಯವಿಲ್ಲವೆಂದು ಅಥವಾ ಮಂಡಲಿಯಲ್ಲಿ ನಿಹಿತವಾಗಿರುವ ಯಾವುದೇ ಇತರ ಭೂಮಿಯು ಸರ್ಕಾರಕ್ಕೆ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಅಗತ್ಯವಿರುವುದೆಂದು ಸರ್ಕಾರಕ್ಕೆ ಕಂಡುಬಂದಾಗಲೆಲ್ಲ. ಆ ಭೂಮಿಯು ಸಂದರ್ಭಾನುಸಾರ, ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಪುನರ್ನಿಹಿತವಾಗತಕ್ಕದ್ದೆಂದು ಅಥವಾ ಅವುಗಳಿಗೆ ವರ್ಗಾಯಿತವಾಗತಕ್ಕದ್ದೆಂದು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು.

**37. ಸ್ವತ್ತನ್ನು ಗೇಣಿಗೆ ಕೊಡಲು, ಮಾರಲು ಅಥವಾ ವರ್ಗಾಯಿಸಲು ಮಂಡಲಿಗಿರುವ ಅಧಿಕಾರ.–** ನಿಯಮಿಸಬಹುದಾದಂಥ ನಿರ್ಬಂಧಗಳಿಗೆ, ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು, ತನಗೆ ಸೇರಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಗೇಣಿಗೆ ಕೊಡಲು, ಮಾರಲು ಅಥವಾ ಅನ್ಯಥಾ ವರ್ಗಾಯಿಸಲು ಮತ್ತು ತನ್ನಲ್ಲಿ ನಿಹಿತವಾದ ಅಥವಾ ತಾನು ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿಯನ್ನು ಬಯಲು ಜಾಗಗಳನ್ನಾಗಿ ರೂಪಿಸುವುದಕ್ಕಾಗಿ ಅಥವಾ ಕಟ್ಟಡಗಳನ್ನು ಕಟ್ಟುವ ಉದ್ದೇಶಗಳಿಗಾಗಿ ಅಥವಾ ಇನ್ನಾವುದೇ ರೀತಿಯಲ್ಲಿ ಯಾವುದೇ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ವಿನಿಯೋಗಿಸಿಕೊಳ್ಳಲು ಅಥವಾ ಬಳಸಿಕೊಳ್ಳಲು ಮಂಡಲಿಗೆ ಅಧಿಕಾರವಿರತಕ್ಕದ್ದು.

**38. ಸಾಲ ಪಡೆಯಲು ಮಂಡಲಿಗಿರುವ ಅಧಿಕಾರ.–** (1) ಸರ್ಕಾರದ ಪೂರ್ವ–ಮಂಜೂರಾತಿಯನ್ನು ಪಡೆದು ಮತ್ತು ಈ ಬಗ್ಗೆ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಾದ ಯಾವುದೇ ಮೊತ್ತವನ್ನು ಮಂಡಲಿಯು ಕಾಲಕಾಲಕ್ಕೆ ಸಾಲವಾಗಿ ಪಡೆಯಬಹುದು.

(2) ಡಿಬೆಂಚರುಗಳನ್ನು ಹೊರಡಿಸುವ ಮೂಲಕ ಸಾಲವನ್ನು ಪಡೆಯಲು ಮತ್ತು ಬ್ಯಾಂಕರುಗಳೊಡನೆ ಹಣದ ವ್ಯವಸ್ಥೆ ಮಾಡಿಕೊಳ್ಳಲು ಈ ಪ್ರಕರಣದ ಉದ್ದೇಶಕ್ಕಾಗಿ ಸರ್ಕಾರದಿಂದ ರಚಿತವಾದ ನಿಯಮಗಳು ಮಂಡಲಿಗೆ ಅಧಿಕಾರವನ್ನು ಕೊಡಬಹುದು.

(3) ಮಂಡಲಿಯು ಹೊರಡಿಸುವ ಡಿಬೆಂಚರುಗಳು, ಸರ್ಕಾರದ ಮಂಜೂರಾತಿಯನ್ನು ಪಡೆದು ಮಂಡಲಿಯು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು.

(4) ಪ್ರತಿಯೊಂದು ಡಿಬೆಂಚರಿಗೂ ಮಂಡಲಿಯ ಅಧ್ಯಕ್ಷರು ಮತ್ತು ಇತರ ಒಬ್ಬ ಸದಸ್ಯನು ಸಹಿ ಮಾಡತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಸಾಲಗಳಿಗೆ ಮತ್ತು ಹೊರಡಿಸುವ ಡಿಬೆಂಚರುಗಳಿಗೆ, ಆ ಅಸಲು ಹಣದ ಮರುಸಂದಾಯಕ್ಕೆ ಮತ್ತು ಸರ್ಕಾರವು ನಿಗದಿಪಡಿಸಬಹುದಾದಂಥ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡುವುದಕ್ಕೆ ಸಂಬಂಧಿಸಿ, ಸರ್ಕಾರವು ಭರವಸೆಯನ್ನು ಕೊಡಬಹುದು.

**39. ಮಂಡಲಿ ನಿಧಿ ಮತ್ತು ಅಂಥ ನಿಧಿಗೆ ಜಮೆ ಮಾಡಬೇಕಾದ ಬಾಬುಗಳ ಮತ್ತು ಅದನ್ನು ಇಡುವುದು.–** (1) ಮಂಡಲಿಯು ತನ್ನ ಸ್ವಂತ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ಅದಕ್ಕೆ ಕೆಳಕಂಡವುಗಳನ್ನು ಜಮೆ ಮಾಡತಕ್ಕದ್ದು:–

(ಎ) ಅನುದಾನಗಳ, ಸಾಲಗಳ, ಮುಂಗಡಗಳ ರೂಪದಲ್ಲಿ ಅಥವಾ ಇತರ ರೀತಿಯಲ್ಲಿ ಸರ್ಕಾರದಿಂದ ಮಂಡಲಿಯು ಸ್ವೀಕರಿಸಿದ ಎಲ್ಲ ಹಣ;

(ಬಿ) ಈ ಅಧಿನಿಯಮದ ಮೇರೆಗೆ ಮಂಡಲಿಯು ಸ್ವೀಕರಿಸಿದ ಎಲ್ಲ ಫೀಜುಗಳು, ಜುಲ್ಮಾನೆಗಳು ಮತ್ತು ಚಾರ್ಜುಗಳು;

(ಸಿ) ಭೂಮಿಗಳ, ಕಟ್ಟಡಗಳ ಅಥವಾ ಇತರ ಸ್ಥಿರ ಅಥವಾ ಚರ ಸ್ವತ್ತುಗಳ ವಿಲೆಯ ಮೂಲಕ ಮಂಡಲಿಯು ಸ್ವೀಕರಿಸಿದ ಎಲ್ಲ ಹಣ;

(ಡಿ) ಬಾಡಿಗೆಗಳ ಮತ್ತು ಲಾಭಗಳ ರೂಪದಲ್ಲಿ ಅಥವಾ ಇತರ ಯಾವುದೇ ರೀತಿಯಲ್ಲಿ ಇತರ ಯಾವುದೇ ಮೂಲಗಳಿಂದ ಮಂಡಲಿಯು ಸ್ವೀಕರಿಸಿದ ಎಲ್ಲ ಹಣ.

(2) ಈ ಅಧಿನಿಯಮವನ್ನು ಕಾರ್ಯಗತಗೊಳಿಸುವುದಕ್ಕಾಗಿ ಮಂಡಲಿಯು ಈ ನಿಧಿಯನ್ನು ವಿನಿಯೋಗಿಸತಕ್ಕದ್ದಲ್ಲದೆ ಇತರ ಯಾವುದೇ ಉದ್ದೇಶಗಳಿಗಾಗಿ ಅಲ್ಲ.

(3) ನಿಯಮಿಸಬಹುದಾದಷ್ಟು ಹಣದ ಮೊತ್ತವನ್ನು ಮಂಡಲಿಯು ತನ್ನ ನಿಧಿಯಿಂದ ಸರ್ಕಾರೀ ಖಜಾನೆಯಲ್ಲಿ ಇಡತಕ್ಕದ್ದು ಮತ್ತು ಅದರಲ್ಲಿ ಮಿಕ್ಕ ಯಾವುದೇ ಹೆಚ್ಚಿನ ಹಣವನ್ನು ಅನುಸೂಚಿತ ಬ್ಯಾಂಕಿನಲ್ಲಿ ಇಡತಕ್ಕದ್ದು ಅಥವಾ ಸರ್ಕಾರವು ಅನುಮೋದಿಸಬಹುದಾದಂಥ ರೀತಿಯಲ್ಲಿ ತೊಡಗಿಸತಕ್ಕದ್ದು.

**40. ಆದಾಯದ ಮತ್ತು ವೆಚ್ಚದ ವಾರ್ಷಿಕ ಅಂದಾಜನ್ನು ಮಂಡಿಸುವುದು.–** (1) ಪ್ರತಿವರ್ಷ ಫೆಬ್ರವರಿ ಒಂದನೇ ದಿನಾಂಕಕ್ಕಿಂತ ತಡವಾಗಿಯಲ್ಲದೆ ನಡೆಯಬೇಕಾದ ವಿಶೇಷ ಸಭೆಯಲ್ಲಿ, ಅನಂತರದಲ್ಲಿ ಬರುವ ಏಪ್ರಿಲ್ 1ನೇ ದಿನಾಂಕದಂದು ಪ್ರಾರಂಭವಾಗುವ ಮುಂದಿನ ವರ್ಷದ ಬಗೆಗಿನ ಆದಾಯದ ಮತ್ತು ವೆಚ್ಚದ ಅಂದಾಜನ್ನು, ಮಂಡಲಿಯು ಕಾಲಕಾಲಕ್ಕೆ ನಿರ್ದೇಶಿಸತಕ್ಕ ವಿವರಗಳೊಂದಿಗೆ ಮತ್ತು ರೂಪದಲ್ಲಿ ಮಂಡಲಿಯ ಮುಂದೆ ಅಧ್ಯಕ್ಷನು ಮಂಡಿಸತಕ್ಕದ್ದು.

(2) ಈ ಅಧಿನಿಯಮವನ್ನು ಸಮರ್ಥವಾಗಿ ಕಾರ್ಯಗತಗೊಳಿಸುವುದಕ್ಕಾಗಿ ಅಂಥ ಅಂದಾಜಿನಲ್ಲಿ ಅವಕಾಶಗಳನ್ನು ಕಲ್ಪಿಸತಕ್ಕದ್ದು ಮತ್ತು ಆ ಅಂದಾಜಿನ ಪ್ರತಿಯನ್ನು ಅಂಚೆಯ ಮೂಲಕ ಅಥವಾ ಅನ್ಯಥಾ ಸಭೆಯ ದಿನಾಂಕಕ್ಕೆ ಕನಿಷ್ಠಪಕ್ಷ ಹತ್ತು ದಿನಗಳಿಗೆ ಮುಂಚಿತವಾಗಿ ಮಂಡಲಿಯ ಪ್ರತಿಯೊಬ್ಬ ಸದಸ್ಯನಿಗೂ ಕಳುಹಿಸತಕ್ಕದ್ದು.

**41. ಮಂಡಲಿಯು ಅಂಥ ಅಂದಾಜುಗಳನ್ನು ಅನುಮೋದಿಸುವುದು ಅಥವಾ ತಿದ್ದುಪಡಿಮಾಡುವುದು.–** ತನಗೆ ಒಪ್ಪಿಸಲಾದ ಅಂದಾಜನ್ನು ಮಂಡಲಿಯು ಪರ್ಯಾಲೋಚಿಸತಕ್ಕದ್ದು ಮತ್ತು ಅದನ್ನು ವ್ಯತ್ಯಾಸಗೊಳಿಸದೆ ಅಥವಾ ತಾನು ಸೂಕ್ತವೆಂದು ಅಲೋಚಿಸುವಂಥ ವ್ಯತ್ಯಾಸಗಳಿಗೆ ಒಳಪಡಿಸಿ ಅನುಮೋದಿಸತಕ್ಕದ್ದು.

**42. ಅಂದಾಜುಗಳನ್ನು ಮಂಜೂರಾತಿಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.–** ಮಂಡಲಿಯು ಅನುಮೋದಿಸುವಂತೆ ಅಂದಾಜನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಅದು ಅಂಥ ಅಂದಾಜನ್ನು ಅಥವಾ ಅದರ ಯಾವುದೇ ಭಾಗವನ್ನು ಮಂಜೂರು ಮಾಡಬಹುದು ಇಲ್ಲವೇ ಮಂಜೂರು ಮಾಡಬಹುದು ಮತ್ತು ಅದನ್ನು ತಿದ್ದುಪಡಿಗಾಗಿ ವಾಪಸ್ಸು ಮಾಡಬಹುದು ಹಾಗೆ ವಾಪಸ್ಸು ಮಾಡಲಾದ ಅಂದಾಜನ್ನು ಮಂಡಲಿಯು ತತ್‌ಕ್ಷಣವೇ ತಿದ್ದುಪಡಿಮಾಡತಕ್ಕದ್ದು ಮತ್ತು ತಿದ್ದುಪಡಿ ಮಾಡಲಾದ ಅಂದಾಜನ್ನು ಸರ್ಕಾರಕ್ಕೆ ಪುನಃ ಒಪ್ಪಿಸತಕ್ಕದ್ದು. ಸರ್ಕಾರವು ಮಂಜೂರು ಮಾಡಿದಂತೆ ಅಂದಾಜಿನ ಪ್ರತಿಯನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

**43. ಅವಶ್ಯವಾದಾಗ ಪೂರಕ ಅಂದಾಜುಗಳನ್ನು ತಯಾರಿಸಬಹುದು ಮತ್ತು ಒಪ್ಪಿಸಬಹುದು.–** ಯಾವ ವರ್ಷದ ಬಗ್ಗೆ ಯಾವುದೇ ಅಂದಾಜನ್ನು ಮಂಜೂರು ಮಾಡಲಾಗಿದೆಯೋ ಆ ವರ್ಷದ ಯಾವುದೇ ಕಾಲದಲ್ಲಿ ಪೂರಕ ಅಂದಾಜನ್ನು ತಯಾರಿಸುವಂತೆ ಮತ್ತು ತನಗೆ ಒಪ್ಪಿಸುವಂತೆ ಮಂಡಲಿಯು ಮಾಡಬಹುದು. ಅಂಥ ಪ್ರತಿಯೊಂದು ಪೂರಕ ಅಂದಾಜನ್ನು ಮಂಡಲಿಯು ಪರ್ಯಾಲೋಚಿಸತಕ್ಕದ್ದು ಮತ್ತು ಅನುಮೋದಿಸತಕ್ಕದ್ದು ಹಾಗೂ ಮಂಜೂರಾತಿಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಹಾಗೆ ಮಂಜೂರಾದ ಅಂದಾಜಿನ ಪ್ರತಿಯನ್ನು, ಅದು ಮೂಲ ವಾರ್ಷಿಕ ಅಂದಾಜು ಆಗಿದ್ದರೆ ಹೇಗೋ ಹಾಗೆ, ಅದೇ ರೀತಿಯಲ್ಲಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

**44. ವೆಚ್ಚದ ಬಗೆಗಿನ ಉಪಬಂಧಗಳು.–** ಅಂದಾಜಿನಲ್ಲಿ ಅಥವಾ ಪೂರಕ ಅಂದಾಜಿನಲ್ಲಿ ಯಾವುದೇ ಮೊಬಲಗನ್ನು ಒದಗಿಸಿದ ಹೊರತು, ಅದನ್ನು ಮಂಡಲಿಯು ಅಥವಾ ಅದರ ಪರವಾಗಿ ವೆಚ್ಚ ಮಾಡತಕ್ಕದ್ದಲ್ಲ:

ಪರಂತು, ಹಾಗೆ ಒದಗಿಸಿರದಿದ್ದರೂ, ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದ ವೆಚ್ಚವನ್ನು ಅನಿರೀಕ್ಷಿತ ಸನ್ನಿವೇಶಗಳಲ್ಲಿ ಅಥವಾ ನ್ಯಾಯಾಲಯದ ಡಿಕ್ರಿಯನ್ನು ಸಮಾಧಾನ ಪಡಿಸುವುದಕ್ಕಾಗಿ ವಹಿಸಬಹುದು ಮತ್ತು ಇಂಥ ಸಂದರ್ಭದಲ್ಲಿ, ಯಾವ ಸನ್ನಿವೇಶಗಳಲ್ಲಿ ಆ ವೆಚ್ಚವನ್ನು ವಹಿಸಲಾಯಿತು ಮತ್ತು ಯಾವ ಮೂಲದಿಂದ ಅದನ್ನು ಭರಿಸಲು ಉದ್ದೇಶಿಸಲಾಯಿತು ಎಂಬುದನ್ನು ತಿಳಿಸುವ ವರದಿಯನ್ನು ಅಧ್ಯಕ್ಷನು ಕಾರ್ಯಸಾಧ್ಯವಾದಷ್ಟು ಬೇಗನೆ ಸರ್ಕಾರಕ್ಕೆ ಕಳುಹಿಸತಕ್ಕದ್ದು:

ಮತ್ತು ಪರಂತು, 43ನೇ ಪ್ರಕರಣದಲ್ಲಿ ಹೇಳಲಾದ ರೀತಿಯಲ್ಲಿ ಅನುಮೋದಿಸಬೇಕಾದ ಮತ್ತು ಮಂಜೂರು ಮಾಡಬೇಕಾದ ಪೂರಕ ಅಂದಾಜಿನಲ್ಲಿ ಅಂಥ ಯಾವುದೇ ವೆಚ್ಚವನ್ನು ಸೇರಿಸತಕ್ಕದ್ದು.

**45. ಪುನರ್ವಿನಿಯೋಗ ಮಾಡಲು ಅಧಿಕಾರ.–** ಈ ಅಧಿನಿಯಮದ ಮೇರೆಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಮಂಜೂರು ಮಾಡಲಾದ ಆಯವ್ಯಯದಲ್ಲಿ ಅದೇ ಲೆಕ್ಕದ ಪ್ರಧಾನ ಶೀರ್ಷಿಕೆಯಲ್ಲಿ, ಒಂದು ಒಳಶೀರ್ಷಿಕೆಯಿಂದ ಮತ್ತೊಂದಕ್ಕೆ ಅಥವಾ ಒಂದು ಉಪಶೀರ್ಷಿಕೆಯಿಂದ ಇನ್ನೊಂದು ಉಪಶೀರ್ಷಿಕೆಗೆ ಮಂಡಲಿಯು ಪುನರ್ವಿನಿಯೋಗಗಳನ್ನು ಮಾಡಬಹುದು.

**46. ಲೆಕ್ಕ ಪರಿಶೋಧನೆ.–** (1) ಸರ್ಕಾರದಿಂದ ನೇಮಿತವಾದ ಲೆಕ್ಕಪರಿಶೋಧಕನು ಮಂಡಲಿಯ ಲೆಕ್ಕಗಳನ್ನು ವಾರ್ಷಿಕವಾಗಿ ಪರಿಶೋಧಿಸತಕ್ಕದ್ದು.

(2) ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಮಂಡಲಿಯ ಎಲ್ಲಾ ಲೆಕ್ಕಗಳಿಗೆ ಮತ್ತು ಇತರ ದಾಖಲೆಗಳಿಗೆ ಲೆಕ್ಕಪರಿಶೋಧಕನಿಗೆ ಪ್ರವೇಶಾವಕಾಶವಿರತಕ್ಕದ್ದು.

(3) ಲೆಕ್ಕಪರಿಶೋಧನೆಗಾಗಿ ನಿಯಮಿಸಬಹುದಾದಂಥ ಚಾರ್ಜುಗಳನ್ನು ಮಂಡಲಿಯು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

**47. ದಸ್ತಾವೇಜನ್ನು ಹಾಜರುಪಡಿಸುವಂತೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳು ಹಾಜರಾಗುವಂತೆ ಅಗತ್ಯಪಡಿಸಲು ಲೆಕ್ಕಪರಿಶೋಧಕನಿಗಿರುವ ಅಧಿಕಾರ.–** (1) ಲೆಕ್ಕ ಪರಿಶೋಧಕನು,–

(ಎ) ಲೆಕ್ಕಗಳಿಗೆ ಸಂಬಂಧಪಟ್ಟಂತೆ ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ವೋಚರುಗಳನ್ನು, ವಿವರಪತ್ರಗಳನ್ನು, ವಿವರ ಪಟ್ಟಿಕೆಗಳನ್ನು, ಪತ್ರ ವ್ಯವಹಾರವನ್ನು, ಟಿಪ್ಪಣಿಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ಬರಹ ರೂಪದಲ್ಲಿ ಅಗತ್ಯಪಡಿಸಬಹುದು;

(ಬಿ) ಅಂಥ ವೋಚರುಗಳಿಗೆ, ವಿವರಪತ್ರಗಳಿಗೆ, ವಿವರಣ ಪಟ್ಟಿಕೆಗಳಿಗೆ, ಪತ್ರವ್ಯವಹಾರಕ್ಕೆ, ಟಿಪ್ಪಣಿಗಳಿಗೆ ಅಥವಾ ಇತರ ದಸ್ತಾವೇಜುಗಳಿಗೆ ಅಥವಾ ಮಂಡಲಿಯ ಯಾವುದೇ ಸ್ವತ್ತಿಗೆ ಜವಾಬ್ದಾರನಾಗಿರುವ ಅಥವಾ ಅವುಗಳ ಅಭಿರಕ್ಷೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ಮಂಡಲಿಯ ಯಾರೇ ಸವೇತನ ನೌಕರನನ್ನು ಅಥವಾ ಸ್ವತಃ ಅಥವಾ ತನ್ನ ಪಾಲುಗಾರರ ಮೂಲಕ ಮಂಡಲಿಯೊಡನೆ ಅಥವಾ ಅದರ ಅಧೀನದಲ್ಲಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಮಂಡಲಿಯ ಕಚೇರಿಯಲ್ಲಿ ತನ್ನ ಮುಂದೆ ಖುದ್ದಾಗಿ ಹಾಜರಾಗಬೇಕೆಂದು ಮತ್ತು ಯಾವುದೇ ಪ್ರಶ್ನೆಗೆ ಉತ್ತರಿಸಬೇಕೆಂದು ಬರಹ ರೂಪದಲ್ಲಿ ಅಗತ್ಯ ಪಡಿಸಬಹುದು;

(ಸಿ) ಅಧ್ಯಕ್ಷನಿಂದ ಅಥವಾ ಯಾರೇ ಅಧಿಕಾರಿಯಿಂದ ಅಥವಾ ಸದಸ್ಯನಿಂದ ಯಾವುದೇ ನಿರ್ದಿಷ್ಟ ಅಂಶದ ಬಗ್ಗೆ ಸ್ಪಷ್ಟೀಕರಣವು ಬರಹರೂಪದಲ್ಲಿ ಅಗತ್ಯವಾಗಿರುವ ಸಂದರ್ಭದಲ್ಲಿ ಅಂಥ ಅಂಶದ ಬಗ್ಗೆ ಸ್ಪಷ್ಟೀಕರಣವನ್ನು ಒದಗಿಸಬೇಕೆಂದು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನು ಮಾಡಿದ ಯಾವುದೇ ಕಡ್ಡಾಯ ಕೋರಿಕೆಯಲ್ಲಿ ಅಂಥ ಕಡ್ಡಾಯ ಕೋರಿಕೆಯನ್ನು ಪಾಲಿಸುವುದಕ್ಕಾಗಿ ಮೂರು ದಿವಸಗಳಿಗೆ ಕಡಿಮೆಯಿರದ ಸಮಂಜಸ ಅವಧಿಯನ್ನು ನಿಗದಿಪಡಿಸಬಹುದು.

(3) ಲೆಕ್ಕಪರಿಶೋಧಕನು ಲೆಕ್ಕಪರಿಶೋಧನೆಯನ್ನು ಪ್ರಾರಂಭಿಸಲು ತಾನು ಉದ್ದೇಶಿಸಿರುವ ದಿನಾಂಕದ ಬಗ್ಗೆ ಎರಡು ವಾರಗಳಿಗೆ ಕಡಿಮೆಯಿರದಷ್ಟು ಮುಂಚಿತವಾಗಿ ಲೆಕ್ಕಪರಿಶೋಧಕನು ಲಿಖಿತ ನೋಟೀಸನ್ನು ಮಂಡಲಿಗೆ ಕೊಡತಕ್ಕದ್ದು.

ಪರಂತು, ಈ ಉಪಪ್ರಕರಣದಲ್ಲಿ ಏನೇ ಇದ್ದರೂ, ಲೆಕ್ಕಪರಿಶೋಧಕನು ತಾನು ಲಿಖಿತ ರೂಪದಲ್ಲಿ ಅಭಿಲೇಖಿಸಬೇಕಾದ ವಿಶೇಷ ಕಾರಣಗಳಿಗಾಗಿ, ಎರಡು ವಾರಗಳಿಗಿಂತ ಕಡಿಮೆ ಅವಧಿಯ ನೋಟೀಸನ್ನು

ಕೊಡಬಹುದು ಅಥವಾ ಸರ್ಕಾರವು ಹಾಗೆ ನಿರ್ದೇಶಿಸಿದರೆ, ವಿಶೇಷವಾದ ಅಥವಾ ಸವಿವರವಾದ ಲೆಕ್ಕ ಪರಿಶೋಧನೆಯನ್ನು ನೋಟೀಸನ್ನು ಕೊಡದೆಯೇ ಪ್ರಾರಂಭಿಸಬಹುದು.

**48. 47ನೇ ಪ್ರಕರಣದ ಮೇರೆಗಿನ ಕಡ್ಡಾಯ ಕೋರಿಕೆಯನ್ನು ಪಾಲಿಸದಿರುವ ಬಗ್ಗೆ ದಂಡ.–** 47ನೇ ಪ್ರಕರಣದ (1)ನೇ ಉಪಪ್ರಕರಣದ (ಎ), (ಬಿ) ಅಥವಾ (ಸಿ) ಖಂಡಗಳ ಮೇರೆಗೆ ಯಾರೇ ವ್ಯಕ್ತಿಗೆ ಕಾನೂನುಬದ್ಧವಾಗಿ ಕಡ್ಡಾಯ ಕೋರಿಕೆಯನ್ನು ಮಾಡಿದಾಗ ಅವನು ಪಾಲಿಸಲು ಬುದ್ಧಿಪೂರ್ವಕವಾಗಿ ನಿರ್ಲಕ್ಷಿಸಿದರೆ ಅಥವಾ ಇನಕಾರ ಮಾಡಿದರೆ, ಅಪರಾದ ನಿರ್ಣಯವಾದ ಮೇಲೆ ಅವನು ಎರಡು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಸರ್ಕಾರದ ಅಥವಾ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯ ಮಂಜೂರಾತಿಯಿಂದ ಹೊರತು, ಈ ಪ್ರಕರಣದ ಮೇರೆಗೆ ಯಾವ ವ್ಯವಹರಣೆಗಳನ್ನೂ ಹೂಡತಕ್ಕದ್ದಲ್ಲ:

ಮತ್ತು ಪರಂತು, ಅಂಥ ಮಂಜೂರಾತಿಯನ್ನು ಕೊಡುವ ಮುಂಚೆ ಸರ್ಕಾರವು ಅಥವಾ ಅಧಿಕೃತ ಅಧಿಕಾರಿಯು, ಯಾರ ವಿರುದ್ಧ ವ್ಯವಹರಣೆಗಳನ್ನು ಹೂಡಬೇಕಾಗಿದೆಯೋ ಆ ವ್ಯಕ್ತಿಗೆ, ಮಂಜೂರಾತಿಯನ್ನು ಏಕೆ ಕೊಡಕೂಡದೆಂಬ ಬಗ್ಗೆ ಕಾರಣ ತೋರಿಸಲು ಕೇಳತಕ್ಕದ್ದು.

**49. ಲೆಕ್ಕಪರಿಶೋಧನಾ ವರದಿ.–** (1) ಲೆಕ್ಕಪರಿಶೋಧಕನು ತನ್ನ ವರದಿಯಲ್ಲಿ,–

(ಎ) ಕಾನೂನು ವಿರುದ್ಧವೆಂದು ತನಗೆ ಕಂಡು ಬಂದ ಪ್ರತಿಯೊಂದು ಸಂದಾಯದ ಬಗ್ಗೆ;

(ಬಿ) ಯಾರೇ ವ್ಯಕ್ತಿಯ ತೀವ್ರ ನಿರ್ಲಕ್ಷ್ಯದಿಂದ ಅಥವಾ ದುರ್ನಡತೆಯಿಂದ ಸಂಭವಿಸಿರುವುದೆಂದು ಕಂಡುಬಂದ ಯಾವುದೇ ಕೊರತೆಯ ಅಥವಾ ನಷ್ಟದ ಮೊಬಲಗಿನ ಬಗ್ಗೆ;

(ಸಿ) ಯಾರೇ ವ್ಯಕ್ತಿಯು ಸ್ವೀಕರಿಸಿರುವ, ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದದ್ದು ಹಾಗೆ ತೆಗೆದು ಕೊಂಡಿರದ ಯಾವುದೇ ಹಣದ ಮೊಬಲಗಿನ ಬಗ್ಗೆ; ಮತ್ತು

(ಡಿ) (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ನಮೂದಿಸಲಾದುವುಗಳನ್ನು ಹೊರತುಪಡಿಸಿ ಲೆಕ್ಕಪತ್ರಗಳಲ್ಲಿ ಅವನಿಗೆ ಕಾಣಬಹುದಾದ ಯಾವುದೇ ಮುಖ್ಯ ಅನೌಚಿತ್ಯದ ಅಥವಾ ಕ್ರಮದೋಷದ ಬಗ್ಗೆ,

– ಹೇಳಿಕೆಯನ್ನು ಸೇರಿಸತಕ್ಕದ್ದು.

(2) ಲೆಕ್ಕಪರಿಶೋಧನೆಯು ಪೂರ್ಣಗೊಂಡ ಅನಂತರದ ಮೂರು ತಿಂಗಳುಗಳೊಳಗೆ, ಲೆಕ್ಕ ಪರಿಶೋಧನೆ ಮಾಡಿದ ಮತ್ತು ಪರೀಕ್ಷಿಸಿದ ಲೆಕ್ಕಗಳ ಬಗೆಗಿನ ವರದಿಯನ್ನು ಲೆಕ್ಕಪರಿಶೋಧಕನು ಮಂಡಲಿಗೆ ಕಳುಹಿಸತಕ್ಕದ್ದು.

**50. ನ್ಯೂನತೆಗಳನ್ನು ಮಂಡಲಿಯು ಪರಿಹರಿಸುವುದು.–** (1) 49ನೇ ಪ್ರಕರಣದ ಮೇರೆಗಿನ ವರದಿಯು ತಲುಪಿದ ಎರಡು ತಿಂಗಳೊಳಗೆ ಅಧ್ಯಕ್ಷನು, ಅಂಥ ವರದಿಯಲ್ಲಿ ತೋರಿಸಬಹುದಾದ ಯಾವುದೇ ನ್ಯೂನತೆಯನ್ನು ಅಥವಾ ಕ್ರಮದೋಷವನ್ನು ಪರಿಹರಿಸಲು ಕೈಕೊಂಡ ಅಥವಾ ಕೈಕೊಳ್ಳಲು ಉದ್ದೇಶಿಸಿದ ಕ್ರಮದ ಬಗೆಗಿನ ಹೇಳಿಕೆ ಮತ್ತು ಅದಕ್ಕೆ ಸಂಬಂಧಿಸಿದ ವಿವರಣೆ ಇವುಗಳೊಂದಿಗೆ ಆ ವರದಿಯನ್ನು ಮಂಡಲಿಯ ಸಭೆಯ ಮುಂದೆ ಇಡತಕ್ಕದ್ದು ಮತ್ತು ಮಂಡಲಿಯ ಅನುಮೋದನೆಯನ್ನು ಪಡೆದು ನ್ಯೂನತೆಗಳನ್ನು ಹಾಗೂ ಕ್ರಮದೋಷಗಳನ್ನು ಪರಿಹರಿಸತಕ್ಕದ್ದು. ಮಂಡಲಿಯು ತೀರ್ಮಾನಿಸಿದ ಅನಂತರ, ಅದಷ್ಟು ಬೇಗನೆ, ಆ ವರದಿಯಲ್ಲಿ ತೋರಿಸಲಾದ ನ್ಯೂನತೆಗಳನ್ನು ಅಥವಾ ಕ್ರಮದೋಷಗಳನ್ನು ಪರಿಹರಿಸಲಾಗಿದೆಯೆಂಬ ತಿಳಿವಳಿಕೆಯನ್ನು ಸಹ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕನಿಗೆ ಅವನು ಕಳುಹಿಸತಕ್ಕದ್ದು, ಅಥವಾ ಅಂಥ ನ್ಯೂನತೆಗಳ ಅಥವಾ ಕ್ರಮದೋಷಗಳ ಬಗ್ಗೆ ಕೊಡಬೇಕೆಂದು ಮಂಡಲಿಯು ತೀರ್ಮಾನಿಸಿದ ಯಾವುದೇ ಹೆಚ್ಚಿನ ವಿವರಣೆಯನ್ನು ಸದರಿ ಅವಧಿಯೊಳಗಾಗಿ ನಿಯಂತ್ರಕನಿಗೆ ಒದಗಿಸತಕ್ಕದ್ದು.

(2) ಅಂಥ ತಿಳಿವಳಿಕೆಯು ಅಥವಾ ವಿವರಣೆಯು ತಲುಪಿದ ಮೇಲೆ, ನಿಯಂತ್ರಕನು,–

(ಎ) ಮಂಡಲಿಯು ಕೊಟ್ಟ ವಿವರಣೆಯನ್ನು ಅಂಗೀಕರಿಸಬಹುದು ಮತ್ತು ಆಕ್ಷೇಪಣೆಯನ್ನು ಹಿಂತೆಗೆದುಕೊಳ್ಳಬಹುದು;

(ಬಿ) ಮುಂದಿನ ಲೆಕ್ಕಪರಿಶೋಧನೆಯ ಕಾಲದಲ್ಲಿ ಅಥವಾ ಅದಕ್ಕೆ ಮುಂಚಿನ ಯಾವುದೇ ದಿನಾಂಕದಂದು ಆ ವಿಷಯವನ್ನು ಪುನಃ ತನಿಖೆ ಮಾಡಬೇಕೆಂದು ನಿರ್ದೇಶಿಸಬಹುದು; ಅಥವಾ

(ಸಿ) ಆ ನ್ಯೂನತೆಗಳನ್ನು ಅಥವಾ ಕ್ರಮದೋಷಗಳನ್ನು ನಿವಾರಿಸಿಲ್ಲವೆಂದು ಅಥವಾ ಪರಿಹರಿಸಿಲ್ಲವೆಂದು ತೀರ್ಮಾನಿಸಬಹುದು;

(3) ನಿಯಂತ್ರಕನು ಸರ್ಕಾರಕ್ಕೆ ವರದಿಯನ್ನು ಕಳುಹಿಸತಕ್ಕದ್ದು ಮತ್ತು ಅಂಥ ವರದಿಯ ಪ್ರತಿಯನ್ನು ಅಧ್ಯಕ್ಷನಿಗೆ ಕಳುಹಿಸಿಕೊಡತಕ್ಕದ್ದು. ನಿಯಂತ್ರಕನು ತನ್ನ ಅಭಿಪ್ರಾಯದಲ್ಲಿ ಆ ನ್ಯೂನತೆಗಳನ್ನು ಅಥವಾ ಕ್ರಮದೋಷಗಳನ್ನು ನಿವಾರಿಸಲಾಗಿದೆಯೆ ಅಥವಾ ಇಲ್ಲವೆ ಅಥವಾ ಪರಿಹರಿಸಲಾಗಿದೆಯೆ ಅಥವಾ ಇಲ್ಲವೆ ಎಂಬುದನ್ನು ವರದಿಯಲ್ಲಿ ನಮೂದಿಸತಕ್ಕದ್ದು ಮತ್ತು ಆ ನ್ಯೂನತೆಗಳನ್ನು ಅಥವಾ ಕ್ರಮದೋಷಗಳನ್ನು ಸಕ್ರಮಗೊಳಿಸಲು ಅಥವಾ ಅವುಗಳನ್ನು ಮನ್ನಿಸಲು ಸಾಧ್ಯವೇ ಎಂಬುದನ್ನು ಸೂಚಿಸತಕ್ಕದ್ದು ಆ ನ್ಯೂನತೆಗಳಿಗೆ ಸಾಕ್ಷ್ಯವೇನೆಂಬುದನ್ನು ಅಥವಾ ಕ್ರಮದೋಷಗಳಿಗೆ ಸಂಬಂಧಿಸಿದ ಮೊಬಲಗುಗಳ ಮೇಲೆ, ಅವನ ಅಭಿಪ್ರಾಯದಲ್ಲಿ ಅಪವ್ಯಯ ಭರ್ತಿಯನ್ನು ಹಾಕಬಹುದೋ ಅಥವಾ ಚಾರ್ಜು ಮಾಡಬಹುದೋ ಎಂಬುದನ್ನು ಸಹ ತಿಳಿಸತಕ್ಕದ್ದು.

(4) ಮಂಡಲಿಯು ತನ್ನ ಮುಂದಿನ ಆಡಳಿತ ವರದಿಯಲ್ಲಿ, (2)ನೇ ಉಪಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾಗಿರುವ ನ್ಯೂನತೆಗಳಿಗೆ ಮತ್ತು ಕ್ರಮದೋಷಗಳಿಗೆ ಸಂಬಂಧಿಸಿದಂಥ 49ನೇ ಪ್ರಕರಣದ ಮೇರೆಗಿನ ವರದಿಯ ಭಾಗಗಳನ್ನು (1)ನೇ ಉಪಪ್ರಕರಣದ ಮೇರೆಗೆ ಕೊಡಲಾದ ವಿವರಣೆ, ಯಾವುದಾದರೂ ಇದ್ದರೆ, ಅದನ್ನು ಮತ್ತು (3)ನೇ ಉಪಪ್ರಕರಣದ ಮೇರೆಗೆ ಅದರ ಮೇಲಿನ ನಿಯಂತ್ರಕನ ಅಂತಿಮ ವರದಿಯನ್ನು ಸೇರಿಸತಕ್ಕದ್ದು.

(5) ಈ ಪ್ರಕರಣದಲ್ಲಿ ಇರುವುದು ಯಾವುದೂ ಅಪರಾಧಿಕ ದುರ್ವಿನಿಯೋಗವನ್ನು ಅಥವಾ ಮೋಸವನ್ನು ಒಳಗೊಳ್ಳುವುದೆಂದು ತನಗೆ ಕಂಡುಬರುವ ಅಥವಾ ವಿಶೇಷ ಗಮನಕ್ಕೆ ಅಥವಾ ತತ್‍ಕ್ಷಣದ ತನಿಖೆಗೆ ಅರ್ಹವಾದ ಯಾವುದೇ ವಿಷಯವನ್ನು ಯಾವುದೇ ಕಾಲದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ನಿಯಂತ್ರಕನನ್ನು ಪ್ರತಿವಾದಿಸತಕ್ಕದ್ದಲ್ಲ.

**51. ಕಾನೂನುವಿರುದ್ಧ ಸಂದಾಯಕ್ಕಾಗಿ ಅಥವಾ ನಿರ್ಲಕ್ಷ್ಯದಿಂದಾಗಿ ಅಥವಾ ದುರ್ನಡತೆಯಿಂದಾಗಿ ಉಂಟಾದ ನಷ್ಟಕ್ಕಾಗಿ ಸರ್ಕಾರವು ಅಪವ್ಯಯ ಭರ್ತಿಯನ್ನು ಅಥವಾ ಚಾರ್ಜನ್ನು ವಿಧಿಸುವುದು.–** (1) ನಿಯಂತ್ರಕನ ವರದಿಯನ್ನು ಪರ್ಯಾಲೋಚಿಸಿದ ಅನಂತರ ಮತ್ತು ಸಂಬಂಧಪಟ್ಟ ವ್ಯಕ್ತಿಯ ವಿವರಣೆಯನ್ನು ತೆಗೆದುಕೊಂಡ ಅನಂತರ ಅಥವಾ ತಾನು ಅವಶ್ಯವೆಂದು ಪರ್ಯಾಲೋಚಿಸುವಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ಅನಂತರ, ಕಾನೂನಿಗೆ ವಿರುದ್ಧವಾದುದೆಂದು ತನಗೆ ಕಂಡುಬರುವ ಯಾವುದೇ ಬಾಬನ್ನು, ಆದೇಶದ ಮೂಲಕ ಸರ್ಕಾರವು ತಳ್ಳಿಹಾಕಬಹುದು ಮತ್ತು ಕಾನೂನು ವಿರುದ್ಧ ಸಂದಾಯವನ್ನು ಮಾಡುವ ಅಥವಾ ಮಾಡಲು ಅಧಿಕೃತಗೊಳಿಸುವ ವ್ಯಕ್ತಿಯ ಮೇಲೆ ಅಪವ್ಯಯ ಭರ್ತಿಯನ್ನು ವಿಧಿಸಬಹುದು; ಮತ್ತು ಆ ವ್ಯಕ್ತಿಯ ನಿರ್ಲಕ್ಷ್ಯದಿಂದಾಗಿ ಅಥವಾ ದುರ್ನಡತೆಯಿಂದಾಗಿ ಉಂಟಾದ ಯಾವುದೇ ಕೊರತೆಯ ಅಥವಾ ನಷ್ಟದ ಮೊಬಲಗನ್ನು, ಅಥವಾ ಆ ವ್ಯಕ್ತಿಯು ಸ್ವೀಕರಿಸಿದ, ಲೆಕ್ಕಪತ್ರಗಳಲ್ಲಿ ತೋರಿಸಬೇಕಾಗಿದ್ದು, ತೋರಿಸಿರದ ಯಾವುದೇ ಅಂಥ ಮೊಬಲಗನ್ನು ಅದಕ್ಕೆ ಜವಾಬ್ದಾರನಾಗಿರುವ ಯಾರೇ ವ್ಯಕ್ತಿಗೆ ವಿಧಿಸಬಹುದು ಮತ್ತು ಅಂಥ ಪ್ರತಿಯೊಂದು ಸಂದರ್ಭದಲ್ಲಿ, ಅಂಥ ವ್ಯಕ್ತಿಯಿಂದ ಬರಬೇಕಾಗಿರುವ ಮೊಬಲಗನ್ನು ಪ್ರಮಾಣೀಕರಿಸತಕ್ಕದ್ದು.

(2) ಪ್ರತಿಯೊಂದು ಅಪವ್ಯಯ ಭರ್ತಿಗೆ ಮತ್ತು ಚಾರ್ಜಿಗೆ ಸಂಬಂಧಿಸಿದ ತನ್ನ ತೀರ್ಮಾನದ ಕಾರಣವನ್ನು ಸರ್ಕಾರವು ಬರಹ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಯಾವ ವ್ಯಕ್ತಿಯ ವಿರುದ್ಧ ಅದನ್ನು ಮಾಡಲಾಗಿದೆಯೋ ಅವನಿಗೆ ಅದರ ಒಂದು ಪ್ರತಿಯನ್ನು ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಸರ್ಕಾರದ ತೀರ್ಮಾನದ ಪ್ರತಿಯನ್ನು ಯಾರಿಗೆ ಕಳುಹಿಸಲಾಗಿದೆಯೋ ಆ ವ್ಯಕ್ತಿಯು ಅದನ್ನು ತೆಗೆದುಕೊಳ್ಳಲು ಇನಕಾರ ಮಾಡಿದರೆ, ಅವನು ಯಾವ ದಿನಾಂಕದಂದು ಅದನ್ನು ಇನಕಾರ ಮಾಡಿದನೋ ಆ ದಿನಾಂಕದಂದು ಅವನು ಅದನ್ನು ಕ್ರಮಬದ್ಧವಾಗಿ ಸ್ವೀಕರಿಸಿದ್ದಾನೆಂದು ಭಾವಿಸತಕ್ಕದ್ದು.

**52. ಅಪವ್ಯಯ ಭರ್ತಿಯನ್ನು ಮತ್ತು ಚಾರ್ಜನ್ನು ಹೇಗೆ ವಸೂಲು ಮಾಡಬೇಕು.–** (1) ಅಪವ್ಯಯ ಭರ್ತಿಯಾಗಿ ಅಥವಾ ಚಾರ್ಜ್ ಆಗಿ ವಿಧಿಸಲಾದ ಮೊಬಲಗನ್ನು, 51ನೇ ಪ್ರಕರಣದ ಮೇರೆಗೆ ಆದೇಶವನ್ನು ತಿಳಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ, ಸಂಬಂಧಪಟ್ಟ ವ್ಯಕ್ತಿಯು, ಖಜಾನೆಯಲ್ಲಿ ಅಥವಾ ಮಂಡಳಿಯ ನಿಧಿಗಳನ್ನು ಇಟ್ಟುಕೊಂಡಿರುವ ಬ್ಯಾಂಕಿನಲ್ಲಿ ಸಂದಾಯ ಮಾಡತಕ್ಕದ್ದು.

(2) ಸದರಿ ಮೊಬಲಗನ್ನು, ಹಾಗೆ ಸಂದಾಯ ಮಾಡದಿದ್ದರೆ ಭೂಕಂದಾಯದ ಬಾಕಿಯೆಂಬಂತೆ ವಸೂಲ್ಮಾಡತಕ್ಕದ್ದು.

## ಅಧ್ಯಾಯ – VII

## ಮಂಡಲಿಯ ಅಧಿಕಾರಿಗಳು ಮತ್ತು ನೌಕರರು

**53. ಸರ್ಕಾರದ ಮಂಜೂರಾತಿಗಾಗಿ ಒಪ್ಪಿಸಬೇಕಾಗಿರುವ ಅಧಿಕಾರಿಗಳ ಮತ್ತು ನೌಕರರ ಅನುಸೂಚಿ.–** ತನ್ನ ಉದ್ದೇಶಗಳಿಗಾಗಿ ನಿಯೋಜಿಸಿಕೊಳ್ಳುವುದು ಅವಶ್ಯಕವೆಂದು ಮತ್ತು ಯುಕ್ತವೆಂದು ತಾನು ಪರ್ಯಾಲೋಚಿಸಬಹುದಾದ ಅಧಿಕಾರಿಗಳ ಮತ್ತು ನೌಕರರ ಸಿಬ್ಬಂದಿಯ ಅನುಸೂಚಿಯನ್ನು ಕಾಲಕಾಲಕ್ಕೆ ಸಿದ್ಧಪಡಿಸಿ ಅದನ್ನು ಸರ್ಕಾರದ ಮಂಜೂರಾತಿಗಾಗಿ ಮಂಡಲಿಯು ಒಪ್ಪಿಸತಕ್ಕದ್ದು. ಅಂಥ ಪ್ರತಿಯೊಬ್ಬ ಅಧಿಕಾರಿಗೆ ಅಥವಾ ನೌಕರನಿಗೆ ಮಂಡಲಿಯು ಕೊಡಲು ಉದ್ದೇಶಿಸಿರುವ ಸಂಬಳಗಳ ಮತ್ತು ಭತ್ಯೆಗಳ ಮೊಬಲಗನ್ನು ಮತ್ತು ಸ್ವರೂಪವನ್ನು ಅಂಥ ಅನುಸೂಚಿಯಲ್ಲಿ ವಿವರಿಸತಕ್ಕದ್ದು. ಮಂಜೂರಾದ ಅನುಸೂಚಿಯಲ್ಲಿ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ, ಯಾವ ವ್ಯತ್ಯಾಸವನ್ನು ಮಾಡತಕ್ಕದ್ದಲ್ಲ.

**54. ನೇಮಕಗಳನ್ನು ಯಾರು ಮಾಡತಕ್ಕದ್ದು.–** ಕರ್ನಾಟಕ ಪೌರಸಭಾ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ, 1964ರ 22)ರ 365ನೇ ಪ್ರಕರಣದ ಉಪಬಂಧಗಳಿಗೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಗೆ ಹಾಗೂ ಉಪವಿಧಿಗಳಿಗೆ ಮತ್ತು 53ನೇ ಪ್ರಕರಣದ ಮೇರೆಗೆ ಸರ್ಕಾರವು ಮಂಜೂರು ಮಾಡಿದ್ದು ತತ್ಕಾಲದಲ್ಲಿ ಜಾರಿಯಲ್ಲಿರುವ ಅನುಸೂಚಿಯಲ್ಲಿರುವುದಕ್ಕೆ ಒಳಪಟ್ಟು (ಮಂಡಲಿಗೆ ಎರವಲು ಕೊಡಲಾದ ಅಥವಾ ಅದರ ಅಧೀನದಲ್ಲಿ ಕೆಲಸ ಮಾಡುವ ಸರ್ಕಾರದ ಅಧಿಕಾರಿಗಳಾಗಿರದ) ಮಂಡಲಿಯ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಿಸುವ, ಅವರಿಗೆ ಬಡ್ತಿ ಕೊಡುವ, ಅವರನ್ನು ಅಮಾನತ್ತಿನಲ್ಲಿಡುವ, ವಜಾ ಮಾಡುವ, ಅವರಿಗೆ ಜುಲ್ಮಾನೆ ವಿಧಿಸುವ, ಕಡಿಮೆ ಮಾಡುವ ಅಥವಾ ರಜೆ ಮಂಜೂರು ಮಾಡುವ ಅಧಿಕಾರಗಳನ್ನು, ಮಾಸಿಕ ವೇತನವು 250 ರೂಪಾಯಿಗಳಿಗೆ ಮೀರದಿರುವ ಅಧಿಕಾರಿಗಳ ಮತ್ತು ನೌಕರರ ಸಂದರ್ಭದಲ್ಲಿ, ಅಧ್ಯಕ್ಷರು ಚಲಾಯಿಸತಕ್ಕದ್ದು ಮತ್ತು ಇತರ ಪ್ರತಿಯೊಂದು ಸಂದರ್ಭದಲ್ಲೂ ಮಂಡಲಿಯು ಚಲಾಯಿಸತಕ್ಕದ್ದು:

ಪರಂತು, ಮಂಡಲಿಗೆ ಎರವಲು ಕೊಡಲಾದ ಸರ್ಕಾರದ ಅಧಿಕಾರಿಗಳ ಸಂದರ್ಭದಲ್ಲಿ, ರಜೆಯನ್ನು ಕೊಡುವ ಮತ್ತು ವೇತನ ಬಡ್ತಿಗಳನ್ನು ಮಂಜೂರು ಮಾಡುವ ಮತ್ತು ನಿಯಮಿಸಲಾದ ಪ್ರಕ್ರಿಯೆಯನ್ನು ಅನುಸರಿಸಿದ ಅನಂತರ, ವೇತನ ಬಡ್ತಿಗಳನ್ನು ತಡೆಹಿಡಿಯುವ ಅಧಿಕಾರಗಳನ್ನು ಅಧ್ಯಕ್ಷನು ಚಲಾಯಿಸಬಹುದು ಮತ್ತು ಅಂಥ ಅಧಿಕಾರಿಯು ಯಾವ ಇಲಾಖೆಗೆ ಸೇರಿರುವನೋ ಆ ಇಲಾಖೆಯ ಮುಖ್ಯಾಧಿಕಾರಿಗೆ, ಆ ಸಂಗತಿಯನ್ನು ವರದಿ ಮಾಡತಕ್ಕದ್ದು.

**ವಿವರಣೆ.–** (1) ಕರ್ನಾಟಕ ಪೌರಸಭಾ ಅಧಿನಿಯಮ, 1964ರ 365ನೇ ಪ್ರಕರಣದ ಉದ್ದೇಶಗಳಿಗಾಗಿ ಮಂಡಲಿಯನ್ನು ಸ್ಥಳೀಯ ಪ್ರಾಧಿಕಾರವೆಂದು ಭಾವಿಸತಕ್ಕದ್ದು.

(2) ಮಂಡಲಿಯು ಯಾರೇ ಅಧಿಕಾರಿಯ ಅಥವಾ ನೌಕರನ ಸೇವೆಯನ್ನು, ಅಂಥ ಅಧಿಕಾರಿಗಳ ಅಥವಾ ಸೇವಕನ ದುರ್ನಡತೆಯ ಕಾರಣದಿಂದಾಗಿ ಅಲ್ಲದೆ, ವರ್ಜಿಸುವ ಅಥವಾ ಅಂಥ ಯಾರೇ ಅಧಿಕಾರಿಗೆ ಅಥವಾ ನೌಕರನಿಗೆ ನಿವೃತ್ತಿ ವೇತನದ, ಉಪದಾನದ ಅಥವಾ ಸಹಾನುಭೂತಿ ಭತ್ಯದ ಮೇಲೆ ನಿವೃತ್ತಿಯಾಗಲು ಅನುಮತಿ ಕೊಡುವ ಅಧಿಕಾರವನ್ನು ಮೇಲೆ ಹೇಳಿದ ಉಪಬಂಧಗಳಿಗೊಳಪಟ್ಟು, ಮಂಡಲಿಯು ಮಾತ್ರ ಚಲಾಯಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ಪಕ್ಷಕಾರನು, ಆ ಆದೇಶವಾದ ಮೂವತ್ತು ದಿನಗಳೊಳಗಾಗಿ ಸರ್ಕಾರಕ್ಕೆ ಅಪೀಲು ಮಾಡಬಹುದು.

## ಅಧ್ಯಾಯ - VIII
## ನಿಯಂತ್ರಣ

**55. ಸರ್ಕಾರದಿಂದ ನಿಯಂತ್ರಣ.–** ಮಂಡಲಿಯ ಮತ್ತು ಅದರ ವ್ಯವಹಾರಗಳ ಸಮರ್ಥ ಆಡಳಿತಕ್ಕಾಗಿ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸಬಹುದಾದಂಥ ನಿರ್ದೇಶನಗಳನ್ನು ಮಂಡಲಿಯು ಕಾರ್ಯಗತಗೊಳಿಸತಕ್ಕದ್ದು.

**56 ಮಂಡಲಿಯಿಂದಾದ ತಪ್ಪುಗಳ ಸಂದರ್ಭದಲ್ಲಿ ಕೈಕೊಳ್ಳಬೇಕಾದ ಕ್ರಮ.–** 55ನೇ ಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ನಿರ್ದೇಶನವನ್ನು ಅಂಥ ನಿರ್ದೇಶನದಲ್ಲಿ ನಿಗದಿಪಡಿಸಿದ ಅವಧಿಯು ಯಾವುದಾದರೂ ಇದ್ದರೆ, ಅದರೊಳಗೆ ಕಾರ್ಯಗತಗೊಳಿಸಲು ಮಂಡಲಿಯು ತಪ್ಪಿದರೆ, ಅಂಥ ಕ್ರಮವನ್ನು ಕೈಗೊಳ್ಳಲು ಸರ್ಕಾರವು ಏರ್ಪಾಟುಗಳನ್ನು ಮಾಡಬಹುದು ಮತ್ತು ಅದಕ್ಕೆ ಸಂಬಂಧಪಟ್ಟ ಎಲ್ಲ ವೆಚ್ಚಗಳನ್ನು ಮಂಡಲಿಯ ನಿಧಿಯಿಂದ ವಸೂಲು ಮಾಡಬಹುದು.

**57. ಆದೇಶ ಇತ್ಯಾದಿಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ಅಧಿಕಾರ.–** ಮಂಡಲಿಯು ಯಾವುದೇ ಆದೇಶವನ್ನು ಅಥವಾ ಗೊತ್ತುವಳಿಯನ್ನು ಕಾರ್ಯಗತಗೊಳಿಸುವುದು ಅಥವಾ ಮಂಡಲಿಯು ಅಥವಾ ಮಂಡಲಿಯ ಪರವಾಗಿ ಮಾಡಲಿರುವ ಅಥವಾ ಮಾಡುತ್ತಿರುವ ಯಾವುದೇ ಕಾರ್ಯವನ್ನು ಮಾಡುವುದು ಅನ್ಯಾಯವೆಂದು, ಕಾನೂನುಬಾಹಿರವೆಂದು, ಅನುಚಿತವೆಂದು ಅಥವಾ ಮಂಡಲಿಯ ಹಿತಾಸಕ್ತಿಗೆ ನಷ್ಟವನ್ನು ಅಥವಾ ಹಾನಿಯನ್ನು ಅಥವಾ ಪ್ರತಿಕೂಲವನ್ನು ಉಂಟುಮಾಡುತ್ತಿದೆಯೆಂದು ಅಥವಾ ಉಂಟುಮಾಡುವ ಸಂಭವವಿದೆಯೆಂದು, ಅಥವಾ ಸಾರ್ವಜನಿಕರಿಗೆ ಕ್ಷತಿಯನ್ನು ಅಥವಾ ಕಿರುಕುಳವನ್ನು ಅಥವಾ ಶಾಂತಿ ಭಂಗವನ್ನು ಉಂಟುಮಾಡುತ್ತಿದೆಯೆಂದು ಅಥವಾ ಉಂಟುಮಾಡುವ ಸಂಭವವಿದೆಯೆಂದು ಸರ್ಕಾರವು ಅಭಿಪ್ರಾಯಪಟ್ಟರೆ, ಅದು ಅಂಥ ಆದೇಶವನ್ನು ಅಥವಾ ಗೊತ್ತುವಳಿಯನ್ನು ಆದೇಶದ ಮೂಲಕ ರದ್ದುಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಇತರ ಆದೇಶವನ್ನು ಮಾಡಬಹುದು.

ಪರಂತು, ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವ ಮುಂಚೆ, ಉದ್ದೇಶಿತ ಆದೇಶದ ವಿರುದ್ಧ ಮನವಿಯನ್ನು ಸಲ್ಲಿಸಲು ಸರ್ಕಾರವು ಮಂಡಲಿಗೆ ಅವಕಾಶ ಕೊಡತಕ್ಕದ್ದು:

ಮತ್ತು ಪರಂತು, ಈ ಪ್ರಕರಣದ ಮೇರೆಗೆ ಕ್ರಮ ಕೈಗೊಳ್ಳುವುದು ಇತ್ಯರ್ಥದಲ್ಲಿರುವಾಗ, ಮಂಡಲಿಯ ಯಾವುದೇ ಆದೇಶವನ್ನು ಅಥವಾ ಗೊತ್ತುವಳಿಯನ್ನು ಕಾರ್ಯಗತಗೊಳಿಸುವಲ್ಲಿ ಮಂಡಲಿಯು ಅಥವಾ ಅದರ ಪರವಾಗಿ ಯಾವುದೇ ಕಾರ್ಯ ಮಾಡುವುದನ್ನು, ಸರ್ಕಾರವು ತಾನು ಸೂಕ್ತವೆಂದು ಆಲೋಚಿಸುವಂಥ ಷರತ್ತುಗಳಿಗೊಳಪಟ್ಟು, ತಡೆಹಿಡಿಯಬೇಕೆಂದು ನಿರ್ದೇಶಿಸಬಹುದು.

**58. ಮಂಡಲಿಯ ರದ್ದಿಯಾತಿ.–** (1) ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ತನಗೆ ವಿಧಿಸಲಾದ ಯಾವುವೇ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಮಂಡಲಿಯು ತಪ್ಪಿದೆಯೆಂದು ಅಥವಾ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದೆಯೆಂದು ಅಥವಾ ಮಂಡಲಿಯ

ಹಿತಾಸಕ್ತಿಗಳಿಗೆ ಅಥವಾ ಅದರ ಹಣಕಾಸಿಗೆ ಪ್ರತಿಕೂಲವಾಗುವ ರೀತಿಯಲ್ಲಿ ವರ್ತಿಸಿದೆಯೆಂದು ಸರ್ಕಾರಕ್ಕೆ ಮನದಟ್ಟಾದರೆ, ಸರ್ಕಾರವು ಅಧಿಸೂಚನೆಯ ಮೂಲಕ ಮಂಡಲಿಯನ್ನು ರದ್ದುಗೊಳಿಸಬಹುದು ಮತ್ತು ಪುನಾರಚಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವ ಮುಂಚೆ ಅದನ್ನು ಯಾಕೆ ರದ್ದುಪಡಿಸಕೂಡದೆಂಬ ಬಗ್ಗೆ ಮನವಿಯನ್ನು ಸಲ್ಲಿಸಲು ಮಂಡಲಿಗೆ ಸರ್ಕಾರವು ಅವಕಾಶವನ್ನು ಕೊಡತಕ್ಕದ್ದು ಮತ್ತು ಆ ಮನವಿಯು ಯಾವುದಾದರೂ ಬಂದರೆ, ಅದನ್ನು ಪರ್ಯಾಲೋಚಿಸತಕ್ಕದ್ದು.

(2) ಮಂಡಲಿಯನ್ನು ರದ್ದುಗೊಳಿಸಿದ ಅನಂತರ ಮತ್ತು ಅದನ್ನು ಪುನರ್ರಚಿಸುವವರೆಗೆ ಮಂಡಲಿಯ ಅಧಿಕಾರಗಳನ್ನು, ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ಸರ್ಕಾರವು ನೇಮಿಸಬಹುದಾದಂಥ ಅಧಿಕಾರಿಯು ಅಥವಾ ಅಧಿಕಾರಿಗಳು ಚಲಾಯಿಸತಕ್ಕದ್ದು.

**59. ಮಂಡಲಿಯ ವಿಘಟನೆ.–** ಮಂಡಲಿಯು ಯಾವ ಉದ್ದೇಶಕ್ಕಾಗಿ ಸ್ಥಾಪಿತವಾಗಿದ್ದಿತೋ ಆ ಉದ್ದೇಶವನ್ನು ಮಂಡಲಿಯ ಅಸ್ತಿತ್ವವನ್ನು ಅನಾವಶ್ಯಕಗೊಳಿಸುವಷ್ಟರಮಟ್ಟಿಗೆ ಬಹಳಷ್ಟು ಸಾಧಿಸಲಾಗಿದೆಯೆಂದು ಸರ್ಕಾರಕ್ಕೆ ಮನದಟ್ಟಾದಲ್ಲಿ ಅದು, ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸಲಾಗುವ ಆದೇಶದ ಮೂಲಕ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮಂಡಲಿಯು ವಿಘಟಿತವಾಗತಕ್ಕದ್ದೆಂದು ಘೋಷಿಸಬಹುದು ಮತ್ತು ತದನಂತರ ಮಂಡಲಿಯು ಅದಕ್ಕನುಸಾರವಾಗಿ ವಿಘಟಿತವಾಗಿದೆಯೆಂದು ಭಾವಿಸತಕ್ಕದ್ದು.

(2) ಸದರಿ ದಿನಾಂಕದಿಂದ,–

(ಎ) ಮಂಡಲಿಯಲ್ಲಿ ನಿಹಿತವಾಗಿರುವ ಅಥವಾ ಅದು ವಸೂಲು ಮಾಡಬೇಕಾದ ಎಲ್ಲ ಸ್ವತ್ತುಗಳು, ನಿಧಿಗಳು, ಬಾಕಿಗಳು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಅಥವಾ ಅದರಿಂದ ವಸೂಲೀಯವಾಗಿರತಕ್ಕದ್ದು;

(ಬಿ) ಮಂಡಲಿಯ ವಿಲೆಗೆ ಒಪ್ಪಿಸಲಾದ ಎಲ್ಲ ಸರ್ಕಾರೀ ಭೂಮಿಗಳು ಪುನಃ ಸರ್ಕಾರದ ವಶಕ್ಕೆ ಬರತಕ್ಕದ್ದು.

(ಸಿ) ಮಂಡಲಿಯ ವಿರುದ್ಧವಾಗಿ ಜಾರಿ ಮಾಡಬಹುದಾದ ಎಲ್ಲ ಹೊಣೆಗಾರಿಕೆಗಳು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ವಿರುದ್ಧವಾಗಿ ಜಾರಿಗೊಳಿಸುವಂಥವಾಗಿರತಕ್ಕದ್ದು; ಮತ್ತು

(ಡಿ) ಮಂಡಲಿಯು ಸಂಪೂರ್ಣವಾಗಿ ಕಾರ್ಯಗತಗೊಳಿಸುವ ಯಾವುದೇ ಅಭಿವೃದ್ಧಿಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಮತ್ತು (ಎ) ಖಂಡದಲ್ಲಿ ಉಲ್ಲೇಖಿತವಾದ ಸ್ವತ್ತುಗಳನ್ನು, ನಿಧಿಗಳನ್ನು ಮತ್ತು ಬಾಕಿಗಳನ್ನು ವಸೂಲು ಮಾಡುವ ಉದ್ದೇಶಕ್ಕಾಗಿ, ಮಂಡಲಿಯ ಪ್ರಕಾರ್ಯಗಳನ್ನು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ನಿರ್ವಹಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಮಂಡಲಿಯು ವಿಘಟಿತವಾದಾಗ, ಮಂಡಲಿಯ ಅಧಿಕಾರಿಗಳ ಮತ್ತು ನೌಕರರ ಸಂಬಂಧದಲ್ಲಿ ತಾನು ಅವಶ್ಯಕವೆಂದು ಭಾವಿಸುವಂಥ ಆದೇಶಗಳನ್ನು ಸರ್ಕಾರವು ಮಾಡಬಹುದು.

**60. ಮಂಡಲಿಯೊಂದಿಗೆ ಮಾಡಿಕೊಂಡ ಕರಾರುಗಳಲ್ಲಿ ಹಿತಾಸಕ್ತಿ ಹೊಂದಿರುವುದಕ್ಕಾಗಿ ದಂಡ.–** ಮಂಡಲಿಯ ಯಾರೇ ಸದಸ್ಯನು ಅಥವಾ ಅಧಿಕಾರಿಯು ಅಥವಾ ನೌಕರನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ತಾನೇ ಅಥವಾ ಪಾಲುದಾನ, ನಿಯೋಜಕನ ಅಥವಾ ನೌಕರನ ಮೂಲಕ ಮಂಡಲಿಯೊಡನೆ, ಅದರ ಮೂಲಕ ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ತಿಳಿದೂ ತಿಳಿದೂ ಆರ್ಜಿಸಿದರೆ, ಅವನು ಭಾರತ ದಂಡ ಸಂಹಿತೆಯ 168ನೇ ಪ್ರಕರಣದ ಮೇರೆಗೆ ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು:

ಪರಂತು, ಮಂಡಲಿಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಜಾಹೀರಾತನ್ನು ಯಾವ ವೃತ್ತ ಪತ್ರಿಕೆಯಲ್ಲಿ ಸೇರಿಸಲಾಗಿದೆಯೋ ಅಂಥ ವೃತ್ತಪತ್ರಿಕೆಯಲ್ಲಿ ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಕಾರಣ ಮಾತ್ರದಿಂದ, ಅಂಥ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ, ಆ ವ್ಯಕ್ತಿಯು ಯಾವುದೇ ಹಿಸ್ಸೆಯನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ.

**61. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರತಕ್ಕದ್ದು.–** ಮಂಡಲಿಯ ಪ್ರತಿಯೊಬ್ಬ ಸದಸ್ಯನು ಮತ್ತು ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನಿಯೋಜಿತನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ವ್ಯಾಪ್ತಿಯಲ್ಲಿ ಲೋಕನೌಕರನೆಂದು ಭಾವಿತನಾಗತಕ್ಕದ್ದು.

**62. ಪ್ರಾಸಿಕ್ಯೂಷನ್‌ಗಳ ಮಂಜೂರಾತಿ.–** ಮಂಡಲಿಯು ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಯು ಮಂಡಲಿಯ ಪೂರ್ವಮಂಜೂರಾತಿಯನ್ನು ಪಡೆದು ಮಾಡಿದ ತಕರಾರಿನ ಮೇಲೆ ಹೊರತು ಈ ಅಧಿನಿಯಮದ, ಅದರ ಮೇರೆಗೆ ರಚಿಸಲಾದ ನಿಯಮಗಳ ಅಥವಾ ಉಪವಿಧಿಗಳ ಮೇರೆಗಿನ ಅಪರಾಧಗಳ ಬಗ್ಗೆ ಯಾವ ನ್ಯಾಯಾಲಯವೂ ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**63. ಜುಲ್ಮಾನೆಗಳನ್ನು ಮಂಡಲಿಯ ನಿಧಿಗೆ ಜಮೆ ಮಾಡತಕ್ಕದ್ದು.–** ನ್ಯಾಯಾಲಯದ ಆದೇಶದ ಮೂಲಕ ಅಥವಾ ಮೇರೆಗೆ ಈ ಅಧಿನಿಯಮದ ಮೇರೆಗೆ ವಸೂಲಿ ಮಾಡಲಾದ ಎಲ್ಲ ಜುಲ್ಮಾನೆಗಳನ್ನು ಮಂಡಲಿಯ ನಿಧಿಗೆ ಜಮೆ ಮಾಡತಕ್ಕದ್ದು.

**64. ಬರಬೇಕಾಗಿರುವ ಮೊತ್ತಗಳ ವಸೂಲಿ.–** 22ನೇ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ, ಮಂಡಲಿಯಲ್ಲಿ ನಿಹಿತವಾದ ಅಥವಾ ಅದು ಆರ್ಜಿಸಿದ ಸ್ವತ್ತಿನ ಮಾರಾಟದ ಉತ್ಪನ್ನದಿಂದ ಅಥವಾ ಇತರ ಯಾವುದೇ ರೀತಿಯಲ್ಲಿ ಯಾರೇ ವ್ಯಕ್ತಿಯಿಂದ ಮಂಡಲಿಗೆ ಬರಬೇಕಾದ ಮತ್ತು ಅಂಥ ವ್ಯಕ್ತಿಗೆ ಮಾಗಣಿ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಹದಿನೈದು ದಿನಗಳ ಅನಂತರ ಬಾಕಿಯಾಗಿ ಉಳಿಯುವ ಎಲ್ಲ ಮೊತ್ತಗಳನ್ನು, ಕೆಳಕಂಡ ವಿಧಾನಗಳ ಪೈಕಿ ಯಾವುದೇ ಒಂದು ಅಥವಾ ಹೆಚ್ಚು ವಿಧಾನಗಳ ಮೂಲಕ ವಸೂಲು ಮಾಡಬಹುದು:–

(1) ಮಂಡಲಿಯ ಆದೇಶದ ಮೂಲಕ ಅಥವಾ ಮೇರೆಗೆ, ಅಂಥ ವ್ಯಕ್ತಿಯ ಚರಾಸ್ತಿಯನ್ನು ರಸ್ತೆ ಮಾಡಿಕೊಂಡು ಮಾರುವ ಮೂಲಕ; ಮತ್ತು

(2) ಯಾವ ಜಿಲ್ಲೆಯಲ್ಲಿ ವ್ಯವಹಣೆಗಳನ್ನು ಕೈಕೊಳ್ಳುವ ಅಗತ್ಯವಿದೆಯೋ ಆ ಜಿಲ್ಲೆಯ ಡೆಪ್ಯುಟಿ ಕಮೀಷನರನಿಗೆ ಈ ಬಗ್ಗೆ ಮಂಡಲಿಯು ಸಲ್ಲಿಸಿದ ಲಿಖಿತ ಅರ್ಜಿಯ ಮೇರೆಗೆ, ಭೂ ಕಂದಾಯದ ಬಾಕಿಯೆಂಬಂತೆ.

**65. ಸದ್ಭಾವನೆಯಿಂದ ಕೈಕೊಳ್ಳಲಾದ ಯಾವುದೇ ಕ್ರಮದ ರಕ್ಷಣೆ.–** ಮಂಡಲಿಯ ಅಧ್ಯಕ್ಷನ, ಸದಸ್ಯನ, ಅಧಿಕಾರಿಯ ಅಥವಾ ನೌಕರನ ಅಥವಾ ಮಂಡಲಿಯ ಆದೇಶಗಳ ಅಥವಾ ನಿರ್ದೇಶನಗಳ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ವಿರುದ್ಧವಾಗಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಅಥವಾ ಉಪವಿಧಿಯ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯದ ಬಗ್ಗೆ ಯಾವುದೇ ದಾವೆಯನ್ನು, ಪ್ರಾಸಿಕ್ಯೂಶನನ್ನು ಅಥವಾ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**66. ನೋಟೀಸಿನ ಜಾರಿ.–** ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ನೋಟೀಸನ್ನು ಅಥವಾ ಮಾಡಿದ ಯಾವುದೇ ಆದೇಶವನ್ನು ನಿಯಮಿಸಲಾದ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

**67. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಕಂಪನಿಯನ್ನು ಮತ್ತು ಆ ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಆ ಕಂಪನಿಯ ಆಡಳಿತವನ್ನು ಹೊಂದಿದ್ದು ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಅವನು ಗುರಿಯಾಗತಕ್ಕದ್ದು ಹಾಗೂ ಅದಕ್ಕನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನಗೆ ಗೊತ್ತಿಲ್ಲದಂತೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದನೆಂದು ಅವನು ರುಜುವಾತುಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಯಾಗುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಆ ಅಪರಾಧವು ಅವನ ಯಾವುದೇ ನಿರ್ಲಕ್ಷ್ಯದಿಂದಾಗಿ ಸಂಭವಿಸಿತೆಂದು ಹೇಳಬಹುದೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ಅದಕ್ಕನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) 'ಎ' ಕಂಪನಿ ಎಂದರೆ, ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಯ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿ 'ನಿರ್ದೇಶಕ' ಎಂದರೆ, ಫರ್ಮಿನ ಒಬ್ಬ ಪಾಲುಗಾರ.

**68. ಇತರ ಕಾನೂನುಗಳ ಪರಿಣಾಮ.–** (1) ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಹೊರತು, ಈ ಅಧಿನಿಯಮದ ಉಪಬಂಧಗಳು ಯಾವುದೇ ಇತರ ಕಾನೂನಿನ ಜೊತೆಗೆ ಇರತಕ್ಕದ್ದಲ್ಲದೆ ಅದನ್ನು ಅಲ್ಪೀಕರಿಸುವುದಿಲ್ಲ.

(2) ಯಾವುದೇ ನಗರ ಪ್ರದೇಶಕ್ಕಾಗಿ ಮಂಡಲಿಯು ರಚಿತವಾಗಿರುವಲ್ಲಿ ಮತ್ತು ಅದು ಅಲ್ಲಿ ಕಾರ್ಯನಿರ್ವಹಿಸುತ್ತಿರುವಲ್ಲಿ, ಕರ್ನಾಟಕ ಪುರಸಭಾ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ, 1964ರ 22)ರ viii ನೇ ಅಧ್ಯಾಯದಲ್ಲಿರುವ ಉಪಬಂಧಗಳು ಅಂಥ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ – IX
## ಸಂಕೀರ್ಣ

**69. ನಿಯಮಗಳು.–** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಅನಂತರ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ.–

(ಎ) ಅಧ್ಯಕ್ಷನಿಗೆ ಮತ್ತು ಸರ್ಕಾರೇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಭತ್ಯೆಗಳು;

(ಬಿ) ಮಂಡಲಿಯ ಯಾವುದೇ ಕರಾರನ್ನು 11ನೇ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಮತ್ತು ಯಾವ ನಮೂನೆಯಲ್ಲಿ ಬರೆದುಕೊಡಬಹುದು;

(ಸಿ) 16ನೇ ಪ್ರಕರಣದ ಮೇರೆಗೆ ಯೋಜನೆಯ ಮಂಜೂರಾತಿಗಾಗಿ ಅರ್ಜಿಯಲ್ಲಿ ಒದಗಿಸಬೇಕಾದ ಹೆಚ್ಚಿನ ವಿವರಗಳು;

(ಡಿ) ಪುರೋಭಿವೃದ್ಧಿ ತೆರಿಗೆಯನ್ನು ಸಂದಾಯ ಮಾಡುವ ರೀತಿ;

(ಇ) ಯಾವ ಪ್ರಕ್ರಿಯೆಗಳಿಗೆ, ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಮತ್ತು ಯಾವ ನಮೂನೆಯಲ್ಲಿ ಚರ ಮತ್ತು ಸ್ಥಿರ ಸ್ವತ್ತನ್ನು ಮಂಡಲಿಯು ಬಾಡಿಗೆಗೆ, ಗೇಣಿಗೆ ಕೊಡಬಹುದು, ಮಾರಬಹುದು ಅಥವಾ ಇತರ ರೀತಿಯಲ್ಲಿ ವರ್ಗಾವಣೆ ಮಾಡಬಹುದು;

(ಎಫ್) ಸರ್ಕಾರೀ ಖಜಾನೆಯಲ್ಲಿ ಮಂಡಲಿಯು ಇಡಬೇಕಾದ ಮೊಬಲಗು;

(ಜಿ) ಮಂಡಲಿಯ ಆಯವಯ್ಯದ ಅಂದಾಜುಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗಾಗಿ ಸಿದ್ದಪಡಿಸಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು;

(ಹೆಚ್) ಈ ಅಧಿನಿಯಮದ ಮೇರೆಗೆ ಯಾವ ವಿಷಯದ ಬಗ್ಗೆ ನಿಯಮಗಳನ್ನು ರಚಿಸಬೇಕೋ ಅಥವಾ ಅವುಗಳ ಅವಶ್ಯಕತೆ ಇದೆಯೋ ಆ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ನಿಯಮವನ್ನು ರಚಿಸುವಲ್ಲಿ, ಅದರ ಉಲ್ಲಂಘನೆಯ ತಪ್ಪಿತಸ್ಥನಾದ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಉಲ್ಲಂಘನೆಯು ಮುಂದುವರಿಯುತ್ತಿರುವ ಸಂದರ್ಭದಲ್ಲಿ, ಅಂಥ ವ್ಯಕ್ತಿಯು ಉಲ್ಲಂಘನೆಯನ್ನು ಮುಂದುವರಿಸಕೂಡದೆಂದು ಅಗತ್ಯಪಡಿಸುವ ಮಂಡಲಿಯ ನೋಟೀಸು ತಲುಪಿದ ಅನಂತರ, ಅಂಥ ಉಲ್ಲಂಘನೆಯು ಮುಂದುವರಿಯುವ ಪ್ರತಿಯೊಂದು ದಿನಕ್ಕೆ ಐವತ್ತು ರೂಪಾಯಿಗಳವರೆಗಿನ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಸರ್ಕಾರವು ಉಪಬಂಧಿಸಬಹುದು.

(4) ಈ ಅಧಿನಿಯಮದ ಮೇರೆಗಿನ ನಿಯಮವನ್ನು ಅದು ಪೂರ್ವಾನ್ವಯವಾಗಿ ಪರಿಣಾಮಕಾರಿ ಯಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ಆ ನಿಯಮವನ್ನು ರಚಿಸುವ ಬಗೆಗಿನ ಕಾರಣಗಳನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಲಾಗುವ ವಿವರಪತ್ರದಲ್ಲಿ ನಿರ್ದಿಷ್ಟ ಪಡಿಸತಕ್ಕದ್ದು. 5ನೇ ಉಪಪ್ರಕರಣದ ಮೇರೆಗೆ ಮಾಡಲಾಗುವ ಯಾವುದೇ ತಿದ್ದುಪಡಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವು, ಅದು ಈ ಅಧಿನಿಯಮದಲ್ಲಿ ಅಧಿನಿಯತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವನ್ನು, ಅದು ರಚಿತವಾದ ಅನಂತರ ಅದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಲಾದ ಅಧಿವೇಶನದ ನಿಕಟೋತ್ತರದ ಅಧಿವೇಶನವು ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳು ಮುಕ್ತಾಯವಾಗುವ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಆ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಸರ್ಕಾರವು, ಸರ್ಕಾರೀ ರಾಜ್ಯಪತ್ರದಲ್ಲಿ ಅಧಿಸೂಚಿಸಿದ ದಿನಾಂಕದಿಂದ, ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ ಅದರೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ನಿಯಮದ ಮೇರೆಗೆ ಆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**70. ಉಪವಿಧಿಗಳನ್ನು ರಚಿಸಲು ಮಂಡಲಿಗಿರುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಆ ಮೇರೆಗೆ ರಚಿತವಾದ ನಿಯಮಗಳಿಗೆ ಒಳಪಟ್ಟು.–

(ಎ) ಮಂಡಲಿಯ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮಂಡಲಿಯ ಅಧಿಕಾರಿಗೆ ಪ್ರತ್ಯಾಯೋಜಿಸುವುದನ್ನು ನಿಯಂತ್ರಿಸುವುದಕ್ಕಾಗಿ;

(ಬಿ) ಈ ಅಧಿನಿಯಮದ ಮೇರೆಗೆ ಅದು ನಿಯೋಜಿಸಕೊಂಡ ವ್ಯಕ್ತಿಗಳ ಮಾರ್ಗದರ್ಶನಕ್ಕಾಗಿ;

(ಸಿ) ಮಂಡಲಿಗೆ ಎರವಲಾಗಿ ಕೊಡಲಾದ ಅಥವಾ ಅದರ ಅಧೀನದಲ್ಲಿ ಕೆಲಸ ಮಾಡುವ ಸರ್ಕಾರೀ ಅಧಿಕಾರಿಗಳಾಗಿರದ, ಮಂಡಲಿಯ ಅಧಿಕಾರಿಗಳ ಮತ್ತು ನೌಕರರ ಸೇವಾಭರ್ತಿಗೆ, ಶಿಸ್ತಿಗೆ ಮತ್ತು ಇತರ ಸೇವಾ ನಿಯಮಗಳಿಗೆ ಸಂಬಂಧಿಸಿದ ವಿಷಯಗಳನ್ನು ನಿಯಂತ್ರಿಸುವುದಕ್ಕಾಗಿ;

(ಡಿ) ಯಾವುದೇ ಯೋಜನೆಯ ಮೇರೆಗೆ ನಿರ್ಮಿತವಾದ ಮನೆಗಳ ವ್ಯವಸ್ಥಾಪನೆಗಾಗಿ, ಬಳಕೆಗಾಗಿ ಮತ್ತು ನಿಯಂತ್ರಣಕ್ಕಾಗಿ;

(ಇ) ಈ ಕೆಳಗಿನ ವಿಷಯಗಳಿಗೆ ಸಂಬಂಧಪಟ್ಟಂತೆ, ಎಂದರೆ, ಸಲ್ಲಿಸಬೇಕಾದ ನೋಟೀಸು, ನೆರೆ ಹೊರೆಯ ಕಟ್ಟಡಗಳೊಂದಿಗಿನ ಮುಂಭಾಗ ರೇಖೆ, ಕಟ್ಟಡದ ಸುತ್ತಲೂ ಖಾಲಿ ಬಿಡಬೇಕಾದ ಸ್ಥಳ, ಅಡಿಪಾಯದ ಮಟ್ಟ ಮತ್ತು ಅಗಲ ಕಟ್ಟಡದ ದೃಢತೆ ಮತ್ತು ಉಪಯೋಗಿಸಬೇಕಾದ ಸಾಮಾಗ್ರಿಗಳು ಮತ್ತು ಚರಂಡಿಗಾಗಿ ಹಾಗೂ ವಾಯುಸಂಚಾರಕ್ಕಾಗಿ ಮಾಡಬೇಕಾದ ಏರ್ಪಾಟು ಇವುಗಳಿಗೆ ಸಂಬಂಧಿಸಿದಂತೆ ಕಟ್ಟಡಗಳ ನಿರ್ಮಾಣವನ್ನು ಮತ್ತು ಪುನರ್ನಿರ್ಮಾಣವನ್ನು ನಿಯಂತ್ರಿಸುವುದಕ್ಕಾಗಿ;

(ಎಫ್) ಬಡಾವಣೆಗಳನ್ನು ಅಥವಾ ಲೇಔಟುಗಳನ್ನು ರೂಪಿಸುವುದಕ್ಕಾಗಿ ಮತ್ತು ಖಾಸಗಿ ಬೀದಿಗಳನ್ನು ರೂಪಿಸುವುದಕ್ಕಾಗಿ, ಬಡಾವಣೆಗಳನ್ನು ಅಥವಾ ಲೇಔಟುಗಳನ್ನು ರೂಪಿಸಲು ಮತ್ತು ಖಾಸಗಿ ಬೀದಿಗಳನ್ನು ನಿರ್ಮಿಸಲು ಅನುಮತಿಗಾಗಿ ಕೊಡುವ ಅರ್ಜಿಯ ಜೊತೆಗೆ ಸಲ್ಲಿಸಬೇಕಾಗಿರುವ ಮಾಹಿತಿಗಾಗಿ ಮತ್ತು ನಕ್ಷೆಗಳಿಗಾಗಿ ಮತ್ತು ಬೀದಿಗಳ ಮಟ್ಟ ಮತ್ತು ಅಗಲವನ್ನು ಹಾಗೂ ಅವುಗಳಿಗೆ ಹೊಂದಿರುವ ಕಟ್ಟಡಗಳ ಎತ್ತರವನ್ನು ನಿಯಂತ್ರಿಸುವುದಕ್ಕಾಗಿ;

(ಜಿ) ಕಾಲುದಾರಿಗಳ ರಚನೆಗೆ, ಬೀದಿ ದೀಪಗಳನ್ನು ಹಾಕುವುದಕ್ಕೆ ಮತ್ತು ಮರಗಳನ್ನು ನೆಡುವುದಕ್ಕೆ ಸಂಬಂಧಿಸಿ; ಮತ್ತು

(ಹೆಚ್) ಈ ಅಧಿನಿಯಮದ ಉದ್ದೇಶಗಳನ್ನು ಸರ್ವೆಸಾಮಾನ್ಯವಾಗಿ ಕಾರ್ಯಗತಗೊಳಿಸುವುದಕ್ಕಾಗಿ ಮಂಡಲಿಯು ಕಾಲಕಾಲಕ್ಕೆ ಉಪವಿಧಿಗಳನ್ನು ರಚಿಸಬಹುದು, ವ್ಯತ್ಯಾಸಗೊಳಿಸಬಹುದು, ಅಥವಾ ರದ್ದುಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಉಪವಿಧಿಯನ್ನು ರಚಿಸುವಲ್ಲಿ ಅದರ ಉಲ್ಲಂಘನೆಯು ಒಂದು ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಅಂಥ ಉಲ್ಲಂಘನೆಯು ಮುಂದುವರೆಯುತ್ತಿರುವ

ಸಂದರ್ಭದಲ್ಲಿ, ಅಂಥ ವ್ಯಕ್ತಿಯು ಆ ಉಲ್ಲಂಘನೆಯನ್ನು ಮುಂದುವರಿಸಕೂಡದೆಂದು ಅಗತ್ಯಪಡಿಸುವ ಮಂಡಲಿಯ ನೋಟೀಸು ಅವನಿಗೆ ತಲುಪಿದ ಅನಂತರ ಅಂಥ ಉಲ್ಲಂಘನೆಯು ಮುಂದುವರಿಯುವ ಪ್ರತಿಯೊಂದು ದಿನಕ್ಕೆ 50 ರೂಪಾಯಿಗಳವರೆಗಿನ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದೆಂದು ಮಂಡಲಿಯು ಉಪಬಂಧಿಸಬಹುದು.

(3) ಅಂಥ ಯಾವುದೇ ಅವಧಿಯು, ಅದನ್ನು ಉಲ್ಲಂಘಿಸುವ ವ್ಯಕ್ತಿಯನ್ನು, ಅಂಥ ಉಲ್ಲಂಘನೆಯಿಂದ ಉಂಟಾದ ಹಾನಿಯು, ಯಾವುದಾದರೂ ಇದ್ದರೆ, ಅದನ್ನು ಪರಿಹರಿಸಲು ಅಗತ್ಯಪಡಿಸತಕ್ಕದ್ದೆಂದು ಸಹ ಉಪಬಂಧಿಸಬಹುದು.

(4) ಈ ಪ್ರಕರಣದ ಮೇರೆಗೆ ಯಾವುದೇ ಉಪವಿಧಿಯನ್ನು ರಚಿಸುವ ಮುಂಚೆ, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ, ಉದ್ದೇಶಿತ ಉಪವಿಧಿಯ ಕರಡನ್ನು, ಆ ಉದ್ದೇಶಿತ ಉಪವಿಧಿಯ ಕರಡನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳಿಗೆ ಮುಂಚಿನದಲ್ಲದ ದಿನಾಂಕವನ್ನು ನಿರ್ದಿಷ್ಟಪಡಿಸುವ ನೋಟೀಸಿನ ಜತೆಗೆ ಮಂಡಲಿಯು ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ದಿನಾಂಕದಂದು ಅಥವಾ ಅದರ ಅನಂತರ ಆ ಕರಡನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು, ಮತ್ತು ಉಪವಿಧಿಯನ್ನು ರಚಿಸುವ ಮುಂಚೆ ಹಾಗೆ ನಿರ್ದಿಷ್ಟಪಡಿಸಲಾದ ದಿನಾಂಕಕ್ಕೆ ಮುಂಚೆ ಸದರಿ ಕರಡಿಗೆ ಸಂಬಂಧಿಸಿ ತನಗೆ ತಲುಪಿದ ಯಾವುದೇ ಆಕ್ಷೇಪಣೆಯನ್ನು ಅಥವಾ ಸೂಚನೆಯನ್ನು ಪರ್ಯಾಲೋಚಿಸತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಮಂಡಲಿಯು ರಚಿಸಿದ ಯಾವ ಉಪವಿಧಿಯೂ, ಅದನ್ನು ಸರ್ಕಾರವು ಅನುಮೋದಿಸುವವರೆಗೆ, ಪರಿಣಾಮಕಾರಿಯಾಗತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಂದು ಉಪವಿಧಿಯನ್ನು, ಆಕ್ಷೇಪಣೆಗಳು ಅಥವಾ ಸೂಚನೆಗಳು, ಯಾವುದಾದರೂ ಇದ್ದರೆ, ಅವುಗಳ ಬಗ್ಗೆ ಮಂಡಲಿಯ ಅಭಿಪ್ರಾಯಗಳನ್ನು ಒಳಗೊಂಡ ಹೇಳಿಕೆಯೊಂದಕ್ಕೆ ಮತ್ತು (4)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಲಾದ ನೋಟೀಸಿನ ಪ್ರತಿಯೊಡನೆ ಮತ್ತು ಆ ಉಪವಿಧಿಯ ಕರಡಿಗೆ ಸಂಬಂಧಿಸಿ ತನಗೆ ತಲುಪಿದ ಪ್ರತಿಯೊಂದು ಆಕ್ಷೇಪಣೆಯೊಡನೆ ಅಥವಾ ಸೂಚನೆಯೊಡನೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(6) ಸರ್ಕಾರವು ಉಪವಿಧಿಯನ್ನು ಅನುಮೋದಿಸುವಾಗ, ಅವಶ್ಯವೆಂದು ತನಗೆ ಕಂಡುಬರುವ ಯಾವುದೇ ಬದಲಾವಣೆಯನ್ನು ಅದರಲ್ಲಿ ಮಾಡಬಹುದು.

(7) ಸರ್ಕಾರದಿಂದ ಅನುಮೋದಿತವಾದಂತೆ ಆ ಪ್ರತಿಯೊಂದು ಉಪವಿಧಿಯನ್ನು ಸರ್ಕಾರೀ ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ರಾಜ್ಯಪತ್ರದಲ್ಲಿ ಉಪವಿಧಿಗಳು ಪ್ರಕಟವಾದ ದಿನಾಂಕಕ್ಕಿಂತ ಮುಂಚಿತವಲ್ಲದ ಮಂಡಲಿಯು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಅಂಥ ಯಾವುದೇ ದಿನಾಂಕವನ್ನು ನಿರ್ದಿಷ್ಟಪಡಿಸದಿದ್ದಾಗ, ಅಂಥ ಪ್ರಕಟಣೆಯ ದಿನಾಂಕದಂದು ಜಾರಿಗೆ ಬರತಕ್ಕದ್ದು.

**71. ನಿಯಮಗಳನ್ನು ಮತ್ತು ಉಪವಿಧಿಗಳನ್ನು ಪ್ರದರ್ಶಿಸತಕ್ಕದ್ದು.–** 69ನೇ ಮತ್ತು 70ನೇ ಪ್ರಕರಣಗಳ ಮೇರೆಗೆ ರಚಿಸಲಾದ ನಿಯಮಗಳನ್ನು ಮತ್ತು ಉಪವಿಧಿಗಳನ್ನು ನಿಯಮಿಸಬಹುದಾದಂಥ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಮಂಡಲಿಯು, ಅದರ ಪ್ರತಿಗಳು ಮಾರಾಟಕ್ಕೆ ದೊರೆಯುವಂತೆ ವ್ಯವಸ್ಥೆ ಮಾಡತಕ್ಕದ್ದು.

**72. ಕರ್ನಾಟಕ ಅಧ್ಯಾದೇಶ, 1975ರ 20ರ ನಿರಸನ.–** (1) ಕರ್ನಾಟಕ ಮೇಲ್ಪಾಟು ಮಂಡಲಿಗಳ ಅಧ್ಯಾದೇಶ, 1975 (ಕರ್ನಾಟಕ ಅಧ್ಯಾದೇಶ, 1975ರ 20) ಇದು ಈ ಮೂಲಕ ನಿರಸಿತವಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಕೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

**ಎ.ಎನ್. ಬ್ಯಾನರ್ಜಿ,**
ಕರ್ನಾಟಕ ರಾಜ್ಯಪಾಲರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಂ. ಉಮೇಶ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

* * * * *